International Journal of Kannada Research 2023; 9(2): 29-35




International Journal of Kannada Research
www.kannadajournal.com

**ISSN: 2454–5813**
IJKR 2023; 9(2): 29-35
© 2023 IJKR
www.kannadajournal.com
Received: 25-01-2023
Accepted: 28-02-2023

**ಡಾ. ಎಂ.ಬಿ. ಸುರೇಶ**
ಕನ್ನಡ ಸಹ ಪ್ರಾಧ್ಯಾಪಕರು,
ಮಹಾರಾಜ ಕಾಲೇಜು, ಮೈಸೂರು,
ಕರ್ನಾಟಕ, ಭಾರತ

**Corresponding Author:**
**ಡಾ. ಎಂ.ಬಿ. ಸುರೇಶ**
ಕನ್ನಡ ಸಹ ಪ್ರಾಧ್ಯಾಪಕರು,
ಮಹಾರಾಜ ಕಾಲೇಜು, ಮೈಸೂರು,
ಕರ್ನಾಟಕ, ಭಾರತ

# ಅರ್ಜುನಪುರಿ ಅಪ್ಪಾಜಿಗೌಡರ ವಿಶಿಷ್ಟ ಕೃತಿ 'ನಿಜವೋ ಸುಳ್ಳೋ ನಿರ್ಧರಿಸಿ'

**ಡಾ. ಎಂ.ಬಿ. ಸುರೇಶ**

**ಪೀಠಿಕೆ**

ಸುದೀರ್ಘವಾದ ಕನ್ನಡ ಸಾಹಿತ್ಯದಲ್ಲಿ ಅನೇಕರು ಮಹನೀಯರು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಪ್ರಖ್ಯಾತಿಯನ್ನು ಗಳಿಸಿಕೊಂಡಿದ್ದಾರೆ. ಇನ್ನೂ ಅನೇಕರು ಸಾಹಿತ್ಯಕ್ಕೆ ಅಗಾಧವಾದ ಕೊಡುಗೆಯನ್ನು ನೀಡಿದ್ದರೂ ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಕಾಣಿಸಿಕೊಳ್ಳದೆ ಮರೆಯಾಗಿ 'ಎಲೆ ಮರೆ ಕಾಯಿ'ಯ ಹಾಗೆ ಇದ್ದು ತಮ್ಮ ನಿಸ್ವಾರ್ಥ ಕಾಯಕವನ್ನು ಮಾಡಿದ್ದಾರೆ; ಮಾಡುತ್ತಿದ್ದಾರೆ. ಅಂತಹ ಮಹನೀಯರಲ್ಲಿ ಅರ್ಜುನಪುರಿ ಅಪ್ಪಾಜಿಗೌಡ ಕೂಡ ಒಬ್ಬರು. ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಸಾದೊಳಲುವಿನಲ್ಲಿ ಜನಿಸಿದ ಅಪ್ಪಾಜಿಗೌಡರು ಕನ್ನಡದಲ್ಲಿ ಎಂ.ಎ. ಹಾಗೂ ಪಿಎಚ್.ಡಿ ಪದವಿ ಪಡೆದು, ಗುಮಾಸ್ತರಾಗಿ ವೃತ್ತಿ ಜೀವನ ಆರಂಭಿಸಿದರು. ತರುವಾಯ ಮದ್ದೂರಿನ ಎಚ್.ಕೆ.ವೀರಣ್ಣಗೌಡ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ವಿಭಾಗದ ಮುಖ್ಯಸ್ಥರಾಗಿ ಮತ್ತು ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಜೊತೆಗೆ ಪತ್ರಿಕಾ ವರದಿಗಾರರಾಗಿಯೂ, ಅಂಕಣ ಬರಹಗಾರರಾಗಿಯೂ ದುಡಿದಿದ್ದಾರೆ. ಇವರ ವಿಶಿಷ್ಟ ಮತ್ತು ವಿಭಿನ್ನ ಬಗೆಯ ಕೃತಿ 'ನಿಜವೋ ಸುಳ್ಳೋ ನಿರ್ಧರಿಸಿ'.

ವಿಶಿಷ್ಟ ನಿರೂಪಣಾ ಶೈಲಿಯೊಂದಿಗೆ ರಚನೆಯಾಗಿರುವ ವಿಶೇಷ ಕೃತಿಯಾಗಿದೆ. ಕೃತಿಯಲ್ಲಿ ಚರ್ಚಿತವಾಗಿರುವ ವಿಷಯಗಳು ಕಾಲ್ಪನಿಕವಾಗಿರದೆ ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಪತ್ರಿಕೆಗಳಲ್ಲಿ ವರದಿಯಾದ ವರದಿಗಳಾಗಿವೆ. ಇಂತಹ ವರದಿಗಳನ್ನು ಅನೇಕ ಸ್ನೇಹಿತರ ಜೊತೆ ಚರ್ಚಿಸಿ, ವಿಮರ್ಶೆಗೆ ಒಳಪಡಿಸಿ, ವೈಚಾರಿಕ ಒರೆಗಲ್ಲಿಗೆ ಹಚ್ಚಿ ವಿಸ್ತೃತವಾದ ರೀತಿಯಲ್ಲಿ ಮಂಡಿಸಿದ್ದಾರೆ. ಆದರೆ ವರದಿಗಳ ಸತ್ಯಾಸತ್ಯತೆಯನ್ನು ನಿರ್ಧರಿಸದೆ ಓದುಗ ವಲಯಕ್ಕೇ ಬಿಟ್ಟಿರುವುದೇ ವಿಶೇಷವಾಗಿದೆ. "ಇಲ್ಲಿ ಚರ್ಚೆ ಇದೆ, ವಿಚಾರ ಇದೆ. ಸಮಕಾಲೀನ ಚಿಂತನೆ ಇದೆ. ಪಳಗಿದ ಕೈಯೊಂದು ತನ್ನ ಸೋಪಜ್ಞತೆಯಿಂದ ಆಸಕ್ತಿ – ಕುತೂಹಲಗಳನ್ನು ಕೆರಳಿಸಿಕೊಂಡು ಹೋಗುವ ರೀತಿಯ ನಿರೂಪಣೆ ಇದೆ. ಬಹುಶಃ ಈ ಕೃತಿ ಓದುಗರಿಗೆ ಜಗತ್ತಿನ 'ವಿಸ್ಮಯ'ಗಳನ್ನು ಪರಿಚಯಿಸುತ್ತಲೇ ತನ್ನೆಡೆಗೆ ಸೆಳೆಯುವ ಬಗ್ಗೆ ನಂಬಿಕೆಯಿದೆ."[೧] ಎಂದು ತಮ್ಮ ಮುನ್ನುಡಿಯಲ್ಲಿ ಲಿಂಗಣ್ಣ ಬಂಧೂಕಾರ್ ಅವರು ಹೇಳಿರುವ ಮಾತುಗಳು ಕೃತಿಯನ್ನು ಅಧ್ಯಯನ ಮಾಡಿದವರಿಗೆ ಅಕ್ಷರಶಃ ಸತ್ಯ ಎನಿಸುತ್ತದೆ.

ಕೃತಿಯಲ್ಲಿ ಬಂದಿರುವ ಅನೇಕ ಘಟನಾವಳಿಗಳಿಗೆ ಸಾಕ್ಷ್ಯಾಧಾರಗಳಿದ್ದು, ಪ್ರತ್ಯಕ್ಷದರ್ಶಿಗಳು ತಮಗಾದ ಅನುಭವವನ್ನು ಮಾಧ್ಯಮಗಳ ಮೂಲಕ ಹೇಳಿಕೊಂಡಿದ್ದಾರೆ. ಇವುಗಳನ್ನು ಪರೀಕ್ಷಿಸಲು ತೆರಳಿದ ಅನುಭವಿ ತಜ್ಞರಿಗೂ ಆಶ್ಚರ್ಯ ಹಾಗೂ ಅಸಹಾಯಕತೆ ಎದುರಾಗಿದೆ. ಆದ್ದರಿಂದಲೇ ಈ ನಿಗೂಢ ಸಂಗತಿಗಳು ಓದುಗ ವಲಯವನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತದೆ. ಅಲ್ಲದೆ ಅನೇಕ ಸಂಗತಿಗಳು ಕೃತಿಯಲ್ಲಿ ಕಂಡು ಬರುತ್ತಿದ್ದು, ಒಂದಕ್ಕೊಂದು ಭಿನ್ನವಾಗಿವೆ.

ಕೃತಿಯಲ್ಲಿನ ಪ್ರಬಂಧಗಳ ನಿರೂಪಣೆಯು ಗೆಳೆಯರು ಹರಟೆ ಹೊಡೆಯುತ್ತಾ ಕುಳಿತು ಚರ್ಚಿಸಿದ ಧಾಟಿಯಲ್ಲಿ ಮೂಡಿಬಂದಿವೆ. ಅರ್ಜುನಪುರಿ ಅಪ್ಪಾಜಿಗೌಡರ ಮನೆಯಲ್ಲಿ ಷಡಕ್ಷರಿ, ಕಲೀಂಸಾಬಿ, ರಾಬರ್ಟ್, ನಾರಾಯಣಿ, ಕಿರಗಂದೂರು ಲಿಂಗಣ್ಣ ಈ ಆರು ಮಂದಿ ಲೋಕಾಭಿರಾಮವಾಗಿ ಹರಟಲು

[೧] ಅರ್ಜುನಪುರಿ ಅಪ್ಪಾಜಿಗೌಡ : ನಿಜವೋ ಸುಳ್ಳೋ ನಿರ್ಧರಿಸಿ (ಮುನ್ನುಡಿ), ಪುಟ – iV

ತೊಡಗಿ ಕೊನೆಗೆ ಗಂಭೀರವಾಗಿ, ವಿಸ್ಮಯಕಾರಿ ವಿಚಾರಗಳ ಪ್ರಸ್ತಾಪಕ್ಕೆ ಹಾದಿಮಾಡಿಕೊಟ್ಟ ರೀತಿಯಲ್ಲಿವೆ. ಆರು ಜನರೂ ಸಾಹಿತ್ಯಾಸಕ್ತರೇ. ಸಮಾಜಮುಖಿ ಚಿಂತಕರೇ ಆಗಿದ್ದಾರೆ. ಒಬ್ಬರಾದ ಮೇಲೆ ಒಬ್ಬರಂತೆ ತಮ್ಮ ಅನುಭವದ ನೆಲೆಯಲ್ಲಿ ನಿರೂಪಿಸಿರುವ ಹಾಗೆ ಪ್ರಬಂಧಗಳು ಮೂಡಿಬಂದಿದ್ದು, ವಿಚಾರಗಳನ್ನು ಪ್ರಸ್ತುತ ಪಡಿಸಿದ ಮೇಲೆ ಒಂದಷ್ಟು ವೈಚಾರಿಕ ಚರ್ಚೆಯನ್ನು ನಡೆಸುತ್ತಾರಾದರೂ ಯಾವುದೇ ತೀರ್ಮಾನಕ್ಕೆ ಬರಲು ಸಾಧ್ಯವಾಗದೆ ಅಂತಿಮ ನಿರ್ಧಾರವನ್ನು ಸಹೃದಯರಿಗೇ ಬಿಟ್ಟಿರುವ ರೀತಿಯಲ್ಲಿ ಪ್ರಬಂಧಗಳು ರಚನೆಯಾಗಿವೆ. ಕೃತಿಯಲ್ಲಿ ಇಪ್ಪತ್ತೆರಡು ಪ್ರಬಂಧಗಳಿದ್ದು, ಅವುಗಳ ವಿಷಯ ವ್ಯಾಪ್ತಿ ಭಿನ್ನವಾಗಿವೆ. ಅಂತರರಾಷ್ಟ್ರೀಯ ವಿಚಾರಗಳಿಂದ ಆರಂಭವಾಗಿ ಪ್ರಾದೇಶಿಕ ವಿಚಾರಗಳವರೆಗೆ ವಿಷಯ ವ್ಯಾಪ್ತಿ ಹರಡಿಕೊಂಡಿರುವುದನ್ನು ಕಾಣುತ್ತೇವೆ.

ಷಡಕ್ಷರಿ ಮತ್ತು ಅರ್ಜುನರ ಹರಟೆಯಿಂದ ಆರಂಭವಾಗುವ ಚರ್ಚೆ ತರುವಾಯ ಕಲೀಂಸಾಬಿ, ರಾಬರ್ಟ್, ನಾರಾಯಣಿ ಮತ್ತು ಕಿರಗಂದೂರು ಲಿಂಗಣ್ಣ ಅವರ ಒಳಗೊಳ್ಳುವಿಕೆಯಿಂದ ಮತ್ತಷ್ಟು ರಂಗೇರುತ್ತದೆ. ಭಾರತದ ವಿದ್ಯುತ್ ಸಮಸ್ಯೆಯಿಂದ ಆರಂಭವಾದ ಇವರ ಚರ್ಚೆ ಅಲ್ಲಿಂದ ಮನುಷ್ಯರ ಸಹನೆ ಮತ್ತು ತಾಳ್ಮೆ, ಕೆಂಗಲ್ ಹನುಮಂತರಾಯರು ವಿಧಾನಸೌಧ ಕಟ್ಟಿಸಿದ್ದು, ಹಿಂದಿನ ರೈಲ್ವೆ ಮಂತ್ರಿಗಳ ಜವಾಬ್ದಾರಿಯುತ ನಡವಳಿಕೆ, ಇಂದಿನ ರಾಜಕಾರಣಿಗಳ ಬೇಜವಾಬ್ದಾರಿತನ, ಮೀಸಲಾತಿ, ಚುನಾವಣಾ ರಾಜಕೀಯ ... ಹೀಗೆ ಮುಂದುವರೆದಾಗ ಷಡಕ್ಷರಿ ರಾಬರ್ಟ್‌ನನ್ನು ಮನೆಯಲ್ಲಿ ಏನು ಮಾಡುತ್ತಿದ್ದೆ? ಎನ್ನುವಲ್ಲಿಗೆ ಬರುತ್ತದೆ. ರಾಬರ್ಟ್ ಎಡ್ಗರ್ ಕೈಸಿ ಬಗ್ಗೆ ಓದುತ್ತಿದ್ದ ವಿಚಾರವನ್ನು ತಿಳಿಸಿ, ಅದನ್ನು ನಂಬಬಹುದ? ಎಂದಾಗ ಮೊದಲು ಅದು ಏನು ಎಂಬುದನ್ನು ಹೇಳು. ನಂಬುವ ಅಥವಾ ಬಿಡುವ ವಿಚಾರ ಆಮೇಲೆ ಎಂದಾಗ ರಾಬರ್ಟ್ ತಾನು ಓದಿದ **ಎಡ್ಗರ್ ಕೈಸಿ** ಬಗ್ಗೆ ಹೇಳಲು ಆರಂಭಿಸುತ್ತಾನೆ. ಈ ರೀತಿಯಲ್ಲಿ ಗೆಳೆಯರ ವಿಚಾರಧಾರೆಗಳು ಒಂದೊಂದಾಗಿ ತೆರೆದುಕೊಳ್ಳುತ್ತಾ ಹೋಗುತ್ತವೆ.

## ವಿಸ್ಮಯಕಾರಿ ವೈದ್ಯ

**ಎಡ್ಗರ್ ಕೈಸಿ** ಮತ್ತು **ಬ್ರೆಜಿಲ್‌ನ ಡಾ. ಅರಿಗೋ** ವಿಸ್ಮಯಕಾರಿ ವೈದ್ಯಕ್ಕೆ ಸಂಬಂಧಿಸಿದ ಪ್ರಬಂಧಗಳಾಗಿವೆ. **ಎಡ್ಗರ್ ಕೈಸಿ** ಅಮೇರಿಕಾದ ಕೆಂಟಕಿ ಹತ್ತಿರದ ಒಂದು ಹಳ್ಳಿಯಲ್ಲಿ ಮಾರ್ಚ್ ೧೮, ೧೮೭೭ರಂದು ಹುಟ್ಟಿದ್ದು, ಹೆಚ್ಚಿನ ವಿದ್ಯಾಭ್ಯಾಸ ಮಾಡಿದವನಲ್ಲ. ಅವನ ೨೪ನೇ ವಯಸ್ಸಿಗೆ ಲಾರಿಂಜೈಟಿಸ್ ಎಂಬ ಗಂಟಲು ಬೇನೆಗೆ ತುತ್ತಾಗಿ ಮಾತು ಕಳೆದುಕೊಳ್ಳುತ್ತಾನೆ. ಎಷ್ಟೇ ವೈದ್ಯರ ಬಳಿ ಅಲೆದರೂ ಪ್ರಯೋಜನವಾಗಿರಲಿಲ್ಲ. ಲ್ಯಾನ್ ಎಂಬ ಮನಃಶಾಸ್ತ್ರಜ್ಞನ ಬಳಿಗೆ ತೆರಳಿದಾಗ ಲ್ಯಾನ್ ಸಮ್ಮೋಹಿನಿ ವಿದ್ಯೆ ಪ್ರಯೋಗಿಸಿ, ಆತನನ್ನು ಸುಪ್ತ ನಿದ್ರೆಗೆ ಕರೆದುಕೊಂಡು ಹೋಗಿ ಮಾತು ಕಳೆದುಕೊಂಡ ಕಾರಣವನ್ನು ಕೇಳಲಾಗಿ, ಧ್ವನಿಪೆಟ್ಟಿಗೆ ಹತ್ತಿರದ ಒಂದು ನರದಲ್ಲಿ ರಕ್ತ ಪೂರೈಕೆ ಆಗುತ್ತಿಲ್ಲ ಅದನ್ನು ಸರಿಪಡಿಸಿ ಎಂದು ಹೇಳುತ್ತಾನೆ. ವೈದ್ಯರ ತಂಡ ಪರೀಕ್ಷೆ ನಡೆಸಿದಾಗ ಆತನ ಮಾತು ನಿಜವಾಗಿತ್ತು ಮತ್ತು ಅದನ್ನು ಸರಿಪಡಿಸುತ್ತಿದ್ದ ಹಾಗೆ ಆತ ಮಾತನಾಡತೊಡಗಿದ.

ಇದನ್ನು ಗಮನಿಸಿದ ಲ್ಯಾನ್ ಸುಪ್ತನಿದ್ರೆಯಲ್ಲಿದ್ದಾಗ ತನ್ನ ಖಾಯಿಲೆಗೆ ಕಾರಣ ಕಂಡುಹಿಡಿದ ಹಾಗೆ ಇತರರ ಕಾಯಿಲೆಗೂ ಕಾರಣ ಹೇಳಬಹುದೇ ಎಂದು ಆಲೋಚಿಸಿ, ಆತನನ್ನು ಸುಪ್ತನಿದ್ರೆಗೆ ಕರೆದುಕೊಂಡು ಹೋಗಿ ತನಗೆ ದೀರ್ಘ ಕಾಲದಿಂದ ಇದ್ದ ಹೊಟ್ಟೆನೋವಿಗೆ ಕಾರಣವನ್ನು ಕೇಳುತ್ತಾನೆ. ಹದಿನೈದು ದಿನಗಳವರೆಗೆ ಕೆಲವು ಮಾತ್ರೆ ತೆಗೆದುಕೊಳ್ಳುವಂತೆ ಮಾತ್ರೆಯ ಹೆಸರಿನೊಂದಿಗೆ ಹೇಳುತ್ತಾನೆ. ಆತನ ಸಲಹೆಯ ಮೇರೆಗೆ ಮಾತ್ರೆಗಳನ್ನು ತೆಗೆದುಕೊಳ್ಳುತ್ತಿದ್ದಂತೆ ಆತನ ದೀರ್ಘಕಾಲದ ಹೊಟ್ಟೆನೋವು ಮರೆಯಾಗುತ್ತದೆ. ಇದು ಲ್ಯಾನ್ ಮತ್ತಿತರರಿಗೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ಜಾಗೃತನಾಗಿದ್ದಾಗ ವೈದ್ಯಶಾಸ್ತ್ರದ ಅರಿವೇ ಇಲ್ಲದ ಕೈಸಿ ಸುಪ್ತನಿದ್ರೆಗೆ ತೆರಳುತ್ತಿದ್ದಂತೆ ವಿಶ್ವದ ವೈದ್ಯರು ಬೆಪ್ಪಾಗುವಂತೆ ಕಾಯಿಲೆಗಳಿಗೆ ಕರಾರುವಕ್ಕಾದ ಕಾರಣಗಳನ್ನು ಹೇಳುವುದಲ್ಲದೆ ಔಷದಿಗಳನ್ನೂ ಸೂಚಿಸುತ್ತಿದ್ದ. ಇದು Newyark Times ಪತ್ರಿಕೆಯಲ್ಲಿ "Illiterate man becomes a Doctor when hypnotized strange power shown by Edgar cayce puzzles physician" ಎಂಬ ಶೀರ್ಷಿಕೆಯಡಿಯಲ್ಲಿಯೂ ಪ್ರಕಟವಾಗುತ್ತದೆ. ಇದರಿಂದ ದಿಢೀರನೆ ಪ್ರಸಿದ್ಧಿಯನ್ನು ಪಡೆದ. ಹಾಗಾಗಿ ಆತನಿಂದ ಸಲಹೆಯನ್ನು ಪಡೆಯಲು ಜನಜಾತ್ರೆ ಸೇರಲು ಶುರುವಾಗುತ್ತದೆ. ಯಾವ ಮಟ್ಟಿಗೆ ಎಂದರೆ ತಮ್ಮ ಸಮಸ್ಯೆಗೆ ಸಲಹೆಯನ್ನು ಪಡೆಯಲು ಈತನ ಬಳಿ ಹೆಸರನ್ನು ನೊಂದಾಯಿಸಿ ತಮ್ಮ ಸರದಿಗಾಗಿ ಒಂದೂವರೆ ವರ್ಷ ಕಾಯಬೇಕಾಗಿತ್ತು.

ಅಲ್‌ಭಾಮಾ ಎಂಬ ತರುಣಿ ಇದ್ದಕ್ಕಿದ್ದ ಹಾಗೆ ಮನೋವಿಕಾರಕ್ಕೆ ಒಳಗಾದಾಗ ಆಕೆಯ ಅಣ್ಣ ಕೈಸಿಯ ಬಳಿ ಬಂದು ಆಕೆಯ ಮನೋವಿಕಾರದ ಕಾರಣವನ್ನು ಕೇಳುತ್ತಾನೆ. ಆ ಸಮಯದಲ್ಲಿ ಅಲ್‌ಭಾಮಾ ಆತನ ಬಳಿ ಇಲ್ಲದೇ ಇದ್ದರೂ ಕ್ಷಣಮಾತ್ರದಲ್ಲಿ ಆಕೆಗೆ Wisdom Teeth ಬೆಳೆಯುತ್ತಿದ್ದು, ಅದು ಮೆದುಳಿಗೆ ರಕ್ತ ಪೂರೈಕೆ ಮಾಡುವ ನರಕ್ಕೆ ಒತ್ತುತ್ತಿದೆ, ನುರಿತ ದಂತ ವೈದ್ಯರ ಬಳಿ ಹೋಗಿ ಹುಟ್ಟುತ್ತಿರುವ ಬುದ್ಧಿ ಹಲ್ಲನ್ನು ತೆಗೆಸಿ ಸರಿಹೋಗುತ್ತಾಳೆ ಎಂಬ ಸಲಹೆಯನ್ನು ನೀಡುತ್ತಾನೆ. ಅದರಂತೆ ಆಕೆಯ ಬುದ್ಧಿಹಲ್ಲನ್ನು ತೆಗೆಸಲು; ಅಲ್‌ಭಾಮ ಸರಿಹೋಗುತ್ತಾಳೆ.

ದಿಢೀರನೆ ಆತನಿಗೆ ಈ ಸಾಮರ್ಥ್ಯ ಬಂದ ಬಗ್ಗೆ ತಾನೇ ಈ ರೀತಿ ಹೇಳಿಕೊಂಡಿದ್ದಾನೆ. **"**ಶತಮಾನಗಳ ಹಿಂದೆ ಈಜಿಪ್ಟ್‌ನಲ್ಲಿ ಧರ್ಮೋಪದೇಶಕನಾಗಿದ್ದು, ಸತ್ತನಂತರ ಪರ್ಶಿಯಾದಲ್ಲಿ ಹುಟ್ಟಿ ವೈದ್ಯಶಾಸ್ತ್ರ ಓದಿದೆ. ಯುದ್ಧದ ಪರಿಣಾಮದಿಂದ ತೀವ್ರಗಾಯಗೊಂಡು, ಅನ್ನ ನೀರಿಲ್ಲದೆ ಒಂಟಿಯಾಗಿ ಕೊರಗಿ ಸತ್ತೆ. ವೈದ್ಯನಾದ ನನಗೆ ಜನಸೇವೆ ಮಾಡುವುದರಲ್ಲಿ ತೃಪ್ತಿಯಾಗಿರಲಿಲ್ಲ. ಈ ಜನ್ಮದಲ್ಲಿ ಎಡ್ಗರ್ ಕೈಸಿಯ ಮೂಲಕ ಜನರ ಆರೋಗ್ಯ ಸೇವೆ ಮಾಡಿ ಸಮಾಜದ ಋಣ ತೀರಿಸುತ್ತಿದ್ದೇನೆ**"**[೨] ಎಂದು. ಆತನ ಪ್ರಕಾರ ವ್ಯಕ್ತಿಯ ವೈಶಿಷ್ಟ್ಯ, ಬದುಕುವ ರೀತಿ, ನಡತೆ ಒಂದು ಜನ್ಮದಲ್ಲಿ ಬಂದದ್ದಲ್ಲ. ಹಲವಾರು ಜನ್ಮಗಳ ಸಾಧನೆಯ ಸಂಗ್ರಹ ಎಂಬುದಾಗಿ ಪುನರ್ಜನ್ಮದ ವಿಚಾರ ಪ್ರಸ್ತಾಪಿಸುತ್ತಾನೆ. ದಪ್ಪಗಿದ್ದ ಸುಂದರ ಹೆಣ್ಣೊಬ್ಬೊಳು ತನ್ನ ಸ್ಥೂಲಕಾಯಕ್ಕೆ ಕಾರಣವನ್ನು ಕೇಳಿದಾಗ, ಹಿಂದಿನ ಜನ್ಮದಲ್ಲಿ ಪ್ರಸಿದ್ಧ ಓಟಗಾರ್ತಿಯಾಗಿದ್ದ ನೀನು ದಪ್ಪಗಿರುವವರನ್ನು ಕಂಡು ತಮಾಷೆ ಮಾಡುತ್ತಿದ್ದೆ, ಅದರ ಕರ್ಮಫಲ ಈ ಜನ್ಮದಲ್ಲಿ ನೀನು ದಪ್ಪಗಾಗಿ ಅನುಭವಿಸುತ್ತಿದ್ದೀಯೇ ಎಂದು ಜನ್ಮಾಂತರದ ಕರ್ಮಫಲವನ್ನು ಬೆಂಬಲಿಸುತ್ತಾನೆ.

ರಾಬರ್ಟ್ ಹೇಳಿದ ಈ ಕಥೆಯನ್ನು ಕೇಳಿದ ಉಳಿದ ಸ್ನೇಹಿತರು ಸಮ್ಮೋಹಿನಿಯಲ್ಲಿ ಸುಪ್ತ ಮನಸ್ಸನ್ನು ಜಾಗೃತಗೊಳಿಸಿದಾಗ ಏನೆಲ್ಲಾ ನಡೆಯುತ್ತವೆ ಎಂಬುದನ್ನು ಕೇಳಿದ್ದೇವೆ. ಆದರೆ ಅರೆ ಆಯುಷ್ಯದಲ್ಲಿ ಸತ್ತ ವೈದ್ಯ ಎಡ್ಗರ್ ಕೈಸಿಯನ್ನೇ ಏಕೆ ಆಯ್ದುಕೊಂಡ ಎಂಬ ವೈಚಾರಿಕ ಪ್ರಶ್ನೆಯನ್ನು ಕೇಳುತ್ತಾರೆ. ಆ ಸಂದರ್ಭದಲ್ಲಿ ಆತ ಹೇಳುವುದು 'ನಿಜವೋ ಸುಳ್ಳೋ ನೀವೇ ನಿರ್ಧರಿಸಿ' ಎಂದು. ಇದು ಕೃತಿಕಾರರ ನಿಲುವೂ ಆಗಿರುವುದನ್ನು ಕಾಣುತ್ತೇವೆ. ಇದರಿಂದ ಪ್ರೇರೇಪಿತನಾದ ಕಲೀಂ ಸಾಬಿ ಇದೇ ರೀತಿಯ ಡಾ. ಅರಿಗೋ ವಿಚಾರವನ್ನು ಮಂಡಿಸುತ್ತಾನೆ.

[೨] ಅರ್ಜುನಪುರಿ ಅಪ್ಪಾಜಿಗೌಡ : ನಿಜವೋ ಸುಳ್ಳೋ ನಿರ್ಧರಿಸಿ, ಪುಟ – ೭

ಬ್ರೆಜಿಲ್‌ನ ಹಳ್ಳಿಯೊಂದರ ರೈತ ಕುಟುಂಬದಲ್ಲಿ ಜನಿಸಿದ ಹುಡುಗ ಅರಿಗೋ. ಈತನೂ ಕೂಡ ಹೆಚ್ಚು ಓದಿದವನಲ್ಲ, ಸಾಧಾರಣವಾಗಿ ಓದಿದ್ದ. ಯುವಕನಾದ ಮೇಲೆ ಮದುವೆಯೂ ಆಯಿತು. ಇದ್ದಕ್ಕಿದ್ದ ಹಾಗೆ ಆತನಿಗೆ ಒಂದು ಸಮಸ್ಯೆ; ಕಿವಿಯಲ್ಲಿ ಯಾರೋ ಒಂದು ಏನೋ ಮಾತನಾಡುತ್ತಿರುವಂತೆ ಆಗುತ್ತದೆ. ಇಎನ್‌ಟಿ ವೈದ್ಯರಿಗೆ ತೋರಿಸಿದರೂ ಏನೂ ಪ್ರಯೋಜನವಾಗುವುದಿಲ್ಲ. ಒಂದು ರಾತ್ರಿ ಅರಿಗೋ ಮಲಗಿದ್ದಾಗ ಯಾರೋ ಬಂದ ಹಾಗೆ ಆಗಿ, ನಾನು ಜರ್ಮನಿಯಲ್ಲಿದ್ದ ಪ್ರಸಿದ್ಧ ವೈದ್ಯ. ನನ್ನ ಹೆಸರು ಫ್ರಿಟ್ಸ್. ಮೊದಲನೆ ಮಹಾಯುದ್ಧದಲ್ಲಿ ಸತ್ತು ಹೋಗಿದ್ದೇನೆ. ಆದರೆ ಜನಸೇವೆ ಮಾಡುವ ನನ್ನ ಹಂಬಲ ಪೂರ್ಣವಾಗಿಲ್ಲ. ನಿನ್ನಲ್ಲಿ ಆಶ್ರಯವನ್ನು ಪಡೆದು ನನ್ನ ಆಸೆಯನ್ನು ಪೂರ್ಣಮಾಡಿಕೊಳ್ಳುತ್ತೇನೆ ಎಂದಾಗ ಅರಿಗೋ ಗಾಬರಿಯಾಗುತ್ತಾನೆ. ಆ ಕ್ಷಣ ಶರೀರದಲ್ಲಿ ಏನೋ ಮಿಂಚಿದಂತಾಗುತ್ತದೆ. ಅಂದಿನಿಂದ ಆತನಲ್ಲಿ ಅಸಮಾನ್ಯ ಶಕ್ತಿ ಕಾಣಿಸಿಕೊಳ್ಳುತ್ತದೆ.

ಕ್ಯಾನ್ಸರ್ ಪೀಡಿತ ಗೆಳೆಯ ಬಿಟನ್ ಕೋರ್ಟ್‌ನ ನರಳಾಟವನ್ನು ನೋಡಲಾಗದೆ ಆವೇಶಗೊಂಡ ಅರಿಗೋ ಅಡುಗೆ ಮನೆಯಲ್ಲಿನ ತರಕಾರಿ ಹಚ್ಚುವ ಹರಿತವಾದ ಚಾಕುವಿನಂದಲೇ ಗೆಳೆಯನ ಹೊಟ್ಟೆಯನ್ನು ಕೊಯ್ದು ಕ್ಯಾನ್ಸರ್ ಗೆಡ್ಡಯನ್ನು ಹೊರತೆಗೆದು ಬಿಸಾಡಿದ. ಕೊಯ್ದ ಜಾಗ ಹೊಲಿಗೆಯಿಲ್ಲದೇ ಅಂಟಿಕೊಳ್ಳುತ್ತದೆ. ಹಾಗೆಯೇ ಗರ್ಭಕೋಶದ ಕ್ಯಾನ್ಸರ್‌ನಿಂದ ದಿನಗಳನ್ನು ಎಣಿಸುತ್ತಿದ್ದ ಹೆಂಡತಿಯ ಗೆಳತಿಗೆ ಸಾಂತ್ವಾನವನ್ನು ನುಡಿಯಲು ಹೋಗಿ, ಮೈ ಮೇಲೆ ಆವೇಶ ಬಂದು ಹತ್ತಿರದಲ್ಲೇ ಇದ್ದ ಹರಿತವಾದ ಚಾಕುವಿನಿಂದ ಕೆಳಹೊಟ್ಟೆಯನ್ನು ಕೊಯ್ದು ಕ್ಯಾನ್ಸರ್ ಗೆಡ್ಡೆಯನ್ನು ತೆಗೆಯುತ್ತಾನೆ.

ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗುತ್ತಿದ್ದ ಹಾಗೆ ಜನಪ್ರಿಯತೆಯನ್ನು ಗಳಿಸಿಕೊಳ್ಳುತ್ತಾನೆ. ಸುದ್ದಿಯನ್ನು ಓದಿದ ಅಮೇರಿಕಾದ ಜನಪ್ರಿಯ ವೈದ್ಯ ಡಾ. ಹೆನ್ರಿ ಪ್ರತಿಕೆಗಳ ಮೂಲಕ ಅರಿಗೋಗೆ "ನಾನು ಕೆಲವು ರೋಗಿಗಳನ್ನು ಕರೆತರುತ್ತೇನೆ. ಅವರನ್ನು ಕೈಯಿಂದ ಮುಟ್ಟದೆ ಸುಮ್ಮನೆ ಕಣ್ಣಿನಿಂದ ಮಾತ್ರ ನೋಡಿ, ಕಾಯಿಲೆ ಏನು? ಔಷಧ ಏನು ಕೊಡಬೇಕು? ಅಂತ ಹೇಳಬೇಕು"[೩] ಎಂದು ಸವಾಲು ಹಾಕಿದ. ಅರಿಗೋ ಸವಾಲನ್ನು ಸ್ವೀಕರಿಸುತ್ತಾನೆ. ಅದರಂತೆ ಡಾ. ಹೆನ್ರಿ ಕೆಲವು ಸಂಕೀರ್ಣ ರೋಗಿಗಳನ್ನು ಗುರುತಿಸಿ, ಬಹಳ ಎಚ್ಚರಿಕೆಯಿಂದ ಪರೀಕ್ಷೆ ಮಾಡಿ, ಕಾಯಿಲೆ ಏನು? ನೀಡಬಹುದಾದ ಔಷಧ ಏನು ಎಂದು ಗುರುತು ಹಾಕಿಕೊಂಡು ಅರಿಗೋ ಬಳಿಗೆ ಕರೆತರುತ್ತಾನೆ. ಅರಿಗೋ ರೋಗಿಗಳನ್ನು ಕೈಯಿಂದ ಮುಟ್ಟದೆಯೇ ನೋಡಿಯೇ ನಿನಗೆ ಇಂತಹ ಕಾಯಿಲೆ ಇದೆ. ಇದು ಬಂದು ಇಷ್ಟು ವರ್ಷ, ತಿಂಗಳು ಆಗಿವೆ. ಇಂತಹ ಔಷಧವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ. ಅರಿಗೋನ ಪ್ರಿಸ್ಕ್ರಿಪ್ಷನ್ ಬರೆದುಕೊಂಡು ನೋಡಿದರೆ ಡಾ. ಹೆನ್ರಿಗೆ ಆಶ್ಚರ್ಯ. ಏಕೆಂದರೆ ತಾನು ಈಗಾಗಲೇ ಗುರುತು ಮಾಡಿಕೊಂಡಿದ್ದ ಬಹುತೇಕ ಔಷಧಿಗಳನ್ನೇ ಆತ ಹೇಳಿದ್ದು ಮಾತ್ರವಲ್ಲದೆ, ಆಗ ತಾನೆ ಮಾರುಕಟ್ಟೆಗೆ ಬಂದಿದ್ದ, ಗೊತ್ತಿಲ್ಲದ ಹೊಸ ಔಷಧಿಗಳನ್ನೂ ಆತ ಹೇಳಿದ್ದ. ಕಣ್ಣಾರೆ ಪರೀಕ್ಷಿಸಿದ ವಿಷಯವನ್ನು ಡಾ. ಹೆನ್ರಿ ಪತ್ರಿಕೆಗಳಲ್ಲಿ ಬರೆದ. ಆ ಮೂಲಕ ಸಾಮಾನ್ಯ ಅರಿಗೋ ಆಗಿದ್ದ ಆತ ಡಾ. ಅರಿಗೋ ಆಗುತ್ತಾನೆ.

ಶಸ್ತ್ರಚಿಕಿತ್ಸೆಗೆ ಬಳಸುತ್ತಿದ್ದ ಆಯುಧಗಳು ಕುದಿಯುವ ನೀರಿನಲ್ಲಿ 'ಸ್ಟರ್‌ಲೈಜ್' ಆದ ಹರಿತವಾದ ಉಪಕರಣಗಳಾಗದೆ ಒರಟಾದ ಚೂರಿ, ಕುಡುಗೋಲುಗಳಾಗಿದ್ದವು. ಶಸ್ತ್ರ ಚಿಕಿತ್ಸೆಯ ವೇಳೆ ರಕ್ತ ಹರಿದರೂ ಸೋಂಕು ತಗುಲುತ್ತಿರಲಿಲ್ಲ. ಕೊಯ್ದಭಾಗಕ್ಕೆ ಹೊಲಿಗೆ ಹಾಕದಿದ್ದರೂ ಅಂಟಿಕೊಳ್ಳುತ್ತಿತ್ತು ಎಂಬ ನಂಬಲಸಾಧ್ಯಾವಾದ ವಿಚಾರವನ್ನು ಕಲೀಂ ಸಾಬಿ ಮಂಡಿಸಿದ. ಈ ಘಟನೆಗೆ ಸ್ನೇಹಿತರು ವಿಜ್ಞಾನ ಎಷ್ಟೇ ಮುಂದುವರೆದಿದ್ದರೂ ಲೋಕದಲ್ಲಿ ನಡೆಯುವ ಅನೇಕ ವಿಚಾರಗಳು ನಮ್ಮ ಪಂಚೇಂದ್ರಿಯಗಳಿಗೆ ನಿಲುಕಲಾರದವು ಎಂಬ ವೈಚಾರಿಕ ನಿಲುವನ್ನು ವ್ಯಕ್ತಪಡಿಸುತ್ತಾರೆ.

**ಮರಣ, ದೆವ್ವ, ಭೂತ**

ಸತ್ತನಂತರ ಮನುಷ್ಯ ಏನಾಗುತ್ತಾನೆ? ಎಂಬುದರ ಕುರಿತು ಸಾಕಷ್ಟು ಜಿಜ್ಞಾಸೆಗಳು ಜಗತ್ತಿನಲ್ಲಿ ನಡೆದಿದ್ದು, ಯಾರಿಗೂ ಸ್ಪಷ್ಟವಾದ ಉತ್ತರ ದೊರೆತಿಲ್ಲ. ಆದರೆ ಆ ಬಗೆಗೆ ಅನೇಕ ನಂಬಿಕೆಗಳು ಜನರಲ್ಲಿ ಇರುವುದನ್ನು ಕಾಣುತ್ತೇವೆ. ಅಂತಹುದೇ ನಂಬಿಕೆಯ ವಿಚಾರವನ್ನು ಒಳಗೊಂಡಿರುವುದು ಡಾ. ರೆಮಾಂಡ್ ಎ. ಮೂಡಿ ಅವರು ಬರೆದಿರುವ 'ಲೈಫ್ ಆಫ್ಟರ್ ಲೈಫ್'. ಇದರ ವಿಚಾರವನ್ನು ಅರ್ಜುನ ಹೇಳಲು ಶುರುಮಾಡುತ್ತಾನೆ.

ಮನುಷ್ಯ ಸತ್ತ ಅನಂತರ ಏನಾಗುತ್ತಾನೆ? ಎಂಬ ಪ್ರಶ್ನೆಗೆ ಉತ್ತರ ಈವರೆಗೂ ದೊರೆತಿಲ್ಲ. ಆದರೆ ಕೆಲವೊಂದು ವಿಸ್ಮಯಕಾರಿ ಘಟನೆಗಳು ನಡೆದಿದ್ದು, ಸತ್ತ ಎಂದು ತೀರ್ಮಾನಿಸಿದ ವ್ಯಕ್ತಿಗಳಲ್ಲಿ ಕೆಲವರು ಬದುಕುಳಿದಿರುವವರು ಕೆಲವರಿದ್ದಾರೆ. ಅಂತಹವರ ಅಭಿಪ್ರಾಯಗಳನ್ನು ಕೇಳಿ ತಿಳಿದು, ಸತ್ತ ಅನಂತರ ಹೀಗಾಗಬಹುದು ಎಂಬ ಒಂದು ಸಣ್ಣ ನಂಬಿಕೆಯನ್ನು ಹೊಂದಿರುತ್ತೇವೆ. ಅಲ್ಲದೆ ಸಾವು ಮತ್ತು ಸಾವಿನ ತರುವಾಯದ ಬಗೆಗೆ ಅನೇಕ ರೋಮಾಂಚನಕಾರಿ ಕಥೆಗಳು ಪ್ರಪಂಚದಾದ್ಯಂತ ಇರುವುದನ್ನು ಕಾಣುತ್ತೇವೆ. ಈ ಘಟನೆಗಳಿಗೆ ಸಾಕ್ಷಿ ಎಂಬಂತೆ ಸತ್ತು ಬದುಕಿದ ಜಾರ್ಜ್‌ರಿಟ್ಜಿ, ಶ್ರೀಮಂತ ವ್ಯಕ್ತಿ ಮತ್ತು ತಿಮ್ಮಕ್ಕ ಮೊದಲಾದವರ ಅಭಿಪ್ರಾಯವನ್ನು ಗೆಳೆಯರು ಇಲ್ಲಿ ಚರ್ಚಿಸಿದ್ದಾರೆ.

ಸತ್ತ ಎಂದು ತೀರ್ಮಾನಿಸಿ ಶವಾಗಾರದಲ್ಲಿ ಇರಿಸಿದ್ದ ಜಾರ್ಜ್‌ರಿಟ್ಜಿ ಕೆಲವು ಕ್ಷಣಗಳಲ್ಲಿ ಕೈ, ಕಾಲು ಆಡಿಸಲು ಶುರುಮಾಡುತ್ತಾನೆ. ಶವಾಗಾರದ ಕಾವಲುಗಾರ ವೈದ್ಯರಿಗೆ ತಿಳಿಸಿದಾಗ ಆಶ್ಚರ್ಯಚಕಿತರಾದ ವೈದ್ಯರು 'ಅಡ್ರೆನಾಲಿನ್' ಇಂಜೆಕ್ಷನ್ ನೀಡುತ್ತಿದ್ದ ಹಾಗೆ ಎದ್ದು ಕೂರುತ್ತಾನೆ. ಆತನ ಅನುಭವ "ನನ್ನ ಶರೀರದ ಸುತ್ತ ಪ್ರಕಾಶಮಾನವಾದ ಬೆಳಕು ಬಿದ್ದಿತು. ಹಿಂದೆ ಸತ್ತು ಹೋಗಿದ್ದ ನನ್ನ ತಾಯಿ, ನನ್ನ ಅಕ್ಕ ಆ ಬೆಳಕಿನಲ್ಲಿ ಸ್ಪಷ್ಟವಾಗಿ ಕಾಣಿಸಿದರು."[೪] ಹಾಗೆಯೇ ಶ್ರೀಮಂತ ವ್ಯಕ್ತಿಗೆ ರಸ್ತೆಯಲ್ಲಿ ಅಪಘಾತವಾಗಲು, ಉಳಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತದೆ. ಆದರೂ ಆತ ಬದುಕುಳಿಯುವುದಿಲ್ಲ. ಸತ್ತ ಎಂದು ತೀರ್ಮಾನಿಸಿ ವೈದ್ಯರು ದೃಢೀಕರಣವನ್ನೂ ಮಾಡುತ್ತಾರೆ. ಆತನೂ ಕೂಡ ಕೆಲವೇ ಸಮಯದಲ್ಲಿ ಬದುಕಿ, ಎದ್ದು ಕೂರುತ್ತಾನೆ. ಆತನ ಅನುಭವವನ್ನು ಕೇಳಿದಾಗ, ತನ್ನ ದೇಹವನ್ನು ತಾನೇ ಹತ್ತಿರದಲ್ಲಿ ನಿಂತು ನೋಡಿದುದಾಗಿಯೂ, ಸತ್ತ ಎಂದು ವೈದ್ಯರು ತಿಳಿಸಿದಾಗ ಸುರಂಗ ಮಾರ್ಗದಲ್ಲಿ ತೆರಳಿದುದಾಗಿಯೂ ಮುಂದೆ ಒಂದು ಬಿಳಿಯ ಗೋಡೆ ಅದಕ್ಕೊಂದು ಬಾಗಿಲು, ತೆರೆದಾಗ ತಂದೆ ಎದುರಾಗಿ ಈಗಲೇ ಏಕೆ ಇಲ್ಲಿಗೆ ಬಂದೆ ಮಾಡಬೇಕಾದ ಕೆಲಸ ಇನ್ನೂ ಇದೆ ಎಂದು ಕಳುಹಿಸಿದ ಎಂಬುದಾಗಿ ಹೇಳುತ್ತಾನೆ. ಇವು ವಿದೇಶದ ವ್ಯಕ್ತಿಗಳ ಅನುಭವವಾಗಿದ್ದು, ಸ್ಥಳೀಯ ಘಟನೆಯೊಂದನ್ನು ಕಲೀಂ ಸಾಬಿ ಹೇಳುತ್ತಾನೆ.

ಘಾಟಿ ಮುದುಕಿಯಾಗಿದ್ದ ತಿಮ್ಮಕ್ಕ ಸತ್ತಳು ಎಂದು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವಾಗ ಆಕೆಯೂ ಎದ್ದು ಕೂರುತ್ತಾಳೆ. ಆಕೆಯ ಪ್ರಕಾರ ಕಪ್ಪಾಗಿದ್ದ ಇಬ್ಬರು ಎಳೆದುಕೊಂಡು ಹೋಗಿ ಸಿಂಹಾಸನದ ಮೇಲೆ ಕುಳಿತಿದ್ದ ದಢೂತಿ ವ್ಯಕ್ತಿಯ ಮುಂದೆ ನಿಲ್ಲಿಸಿದರು. ಆತ "ಮೇಗಳ ಬೀದಿ ತಿಮ್ಮಮ್ಮನ್ನ ಎಳ್ಕೊಂಡು ಬನ್ನಿ

[೩] ಅದೇ : ಪುಟ – ೧೨

[೪] ಅದೇ : ಪುಟ – ೧೪

ಅಂದ್ರೆ, ಕೆಳಗಲ ಬೀದಿ ತಿಮ್ಮಕ್ಕನ್ನ ಕರ್‍ಕೊಂಡು ಬಂದಿರೇನ್ರೋ"[೫] ಎಂದು ಕಳುಹಿಸಿದ ಎಂದವಳು. ಕೆಲ ಸಮಯದಲ್ಲಿಯೇ ಮೇಗಳ ಬೀದಿಯ ತಿಮ್ಮಮ್ಮ ಸತ್ತಳು ಎಂಬ ವಿಚಾರವನ್ನು ಕಲೀ ಸಾಬಿ ತಿಳಿಸುತ್ತಾನೆ.

ಅರ್ಜುನ ಮತ್ತು ಕಲೀ ಸಾಬಿ ಅವರ ವಿಚಾರಗಳನ್ನು ಕೇಳಿದ ಉಳಿದ ಗೆಳೆಯರು ಇದು 'ಗರುಡ ಪುರಾಣ'ವನ್ನು ನೆನಪಿಗೆ ತರುತ್ತದೆ. ೧೪ ಲೋಕಗಳಲ್ಲಿ ಅವರು ತೆರಳಿದ್ದು ಯಾವ ಲೋಕಕ್ಕೆ ಎಂಬ ತರ್ಕವನ್ನು ಒಡ್ಡುತ್ತಾರೆ. ಹಾಗೆಯೇ ಇದು ಕೇವಲ ಭ್ರಮೆ ಇರಬಹುದು ಎಂದು ವೈಚಾರಿಕ ಆಲೋಚನೆಯನ್ನು ಮಂಡಿಸುತ್ತಾರೆ. ದೆವ್ವ ಭೂತಗಳ ನಂಬಿಕೆಯ ವಿಚಾರ ನಡುವೆ ಬಂದಾಗ ಅದಕ್ಕೆ ಸಂಬಂಧಿಸಿದಂತೆ ಷಡಕ್ಷರಿ ವಿಷಯವೊಂದನ್ನು ಮಂಡಿಸುತ್ತಾನೆ.

ದೆವ್ವ ಮತ್ತು ಭೂತಗಳು ತೊಂದರೆ ಕೊಡುತ್ತವೆ ಎಂಬುದು ಮನುಷ್ಯರ ಭಾವನೆ. ಯಾವುದೋ ಕಾರಣದಿಂದ ಏನೋ ಒಂದು ಘಟನೆ ಘಟಿಸಿದರೆ ಅದನ್ನು ದೆವ್ವ, ಭೂತಗಳ ಕಾಟಕ್ಕೆ ತಳುಕು ಹಾಕುವುದು ಅನಾದಿ ಕಾಲದಿಂದಲೂ ನಡೆದು ಬಂದಿರುವ ವಿಚಾರವೇ. ಅದನ್ನು ಸಮರ್ಥಿಸುವ ಪ್ರಬಂಧ 'ಶಬ್ದಕ್ಕೆ ಸಿಟ್ಟಾದ ಪ್ರೇತ'. ಕಾನ್ಪುರದ ಒಂದು ಶ್ಮಶಾನದ ಸಮೀಪದಲ್ಲಿ ೧೯೫೬ರಲ್ಲಿ ಕಾರ್ಖಾನೆಯೊಂದನ್ನು ಪ್ರಾರಂಭಿಸಲಾಯಿತು. ಸಾಗಾಣಿಕೆಗಾಗಿ ರಸ್ತೆ ನಿರ್ಮಾಣ, ಅದರ ಪರಿಣಾಮ ವಾಹನಗಳ ಓಡಾಟ ಆರಂಭವಾಗುತ್ತದೆ. ಸುಮಾರು ೧೫೦೦ ಮೀಟರ್ ಉದ್ದದ ಆ ರಸ್ತೆಯಲ್ಲಿ ಅಂದಿನಿಂದ ಅನೇಕ ಅಪಘಾತಗಳು ಆರಂಭವಾಗುತ್ತವೆ. ಅಪಘಾತದಲ್ಲಿ ಸತ್ತ ವ್ಯಕ್ತಿಗಳ ತಲೆ ಮಾತ್ರ ಜಜ್ಜಿ ಹೋಗಿ ಉಳಿದ ಅಂಗಗಳಿಗೆ ಯಾವುದೇ ತೊಂದರೆಯಾಗುತ್ತಿರಲಿಲ್ಲ. ವಾಚಸ್ಪತಿ, ಅತ್ತೆ ಸೊಸೆಯರಲ್ಲಿ ಸೊಸೆ, ಗಾರೆ ಕೆಲಸಗಾರರು, ಅದೇ ಕಾರ್ಖಾನೆಯ ನೌಕರ ಇವರೇ ಮೊದಲಾದ ಅನೇಕರು ಆ ೧೫೦೦ ಮೀಟರ್ ಉದ್ದದ ರಸ್ತೆಯಲ್ಲಿ ಅಪಘಾತಕ್ಕೀಡಾಗುತ್ತಾರೆ. ಈ ಅಪಘಾತದಲ್ಲಿ ಅವರ ತಲೆಗಳು ಮಾತ್ರ ಜಜ್ಜಿ ಹೋಗುತ್ತವೆ. ಪ್ರತ್ಯಕ್ಷದರ್ಶಿಗಳನ್ನು, ಅಪಘಾತ ಮಾಡಿದ ವಾಹನ ಚಾಲಕರನ್ನು ವಿಚಾರಣೆಗೆ ಒಳಪಡಿಸಿದಾಗ ಬಹುತೇಕ ಎಲ್ಲರ ಉತ್ತರವೂ "ಜೋರಾಗಿ ಗಾಳಿ ಬೀಸಿತು. ಸ್ವಲ್ಪ ಹೊಗೆ ತುಂಬಿಕೊಂಡ ಹಾಗೆ, ಕತ್ತಲಾದ ಹಾಗೆ ಆಯಿತು. ಮರದಷ್ಟು ಎತ್ತರವಾಗಿದ್ದ ಒಬ್ಬ ಮನುಷ್ಯ ಅಡ್ಡವಾಗಿ ಬಂದ."[೬] ಆಶ್ಚರ್ಯವೆಂದರೆ ಅಲ್ಲಿ ಬೀಸಿದ ಆ ಬಿರುಗಾಳಿ ಬೇರೆಲ್ಲೂ ಬೀಸಿರುವುದಿಲ್ಲ.

ಅಲ್ಲಿಯ ಜನ ಶ್ಮಶಾನದ ಸಮೀಪದಲ್ಲಿ ಕಾರ್ಖಾನೆಯನ್ನು ಸ್ಥಾಪಿಸಿ ವಾಹನಗಳ ಓಡಾಟ ಆರಂಭವಾಗಲು, ಅದರಿಂದ ಉಂಟಾದ ಶಬ್ದಕ್ಕೆ ಸಿಟ್ಟಾದ ದೆವ್ವ ಈ ಕೆಲಸವನ್ನು ಮಾಡುತ್ತಿದೆ ಎಂದು ನಂಬಿದ್ದಾರೆ ಎಂಬುದಾಗಿ ಷಡಕ್ಷರಿ ತಿಳಿಸುತ್ತಾನೆ. ಅದಕ್ಕೆ ನಾರಾಯಣಿ ಕೆಲವರು ದೆವ್ವ, ಭೂತ ಇದೆ, ಇಲ್ಲ ಎಂಬ ಗೊಂದಲದಲ್ಲಿ ಇದ್ದಾರೆ. ಇಲ್ಲ ಎಂಬ ನಂಬಿಕೆ ದೃಢವಾಗಿದ್ದರೆ ಏನೂ ಆಗುವುದಿಲ್ಲ. ಬದಲಾಗಿ ನಂಬಿಕೆ ದೃಢವಾಗಿಲ್ಲದಿದ್ದರೆ ಅಪಾಯ ಎಂಬುದನ್ನು ತಿಳಿಸಲು ಪರಶಿವ ಎಂಬ ಹುಡುಗನ ಕಥೆಯನ್ನು ಹೇಳುತ್ತಾನೆ. ದೆವ್ವ, ಭೂತ ಇಲ್ಲ ಎಂದು ವಾದ ಮಾಡುವ ಆತ ಗೆಳೆಯರೊಂದಿಗೆ ಸವಾಲು ಹಾಕಿ, ಅದೇ ರೀತಿ ಅಮಾವಾಸ್ಯೆಯ ಕತ್ತಲಿನಲ್ಲಿ ಶ್ಮಶಾನದಲ್ಲಿರುವ ಹುಣಸೇ ಮರದ ಬುಡಕ್ಕೆ ಮೊಳೆ ಹೊಡೆದು ಬರಲು ಹೋಗುತ್ತಾನೆ. ಮೊಳೆ ಹೊಡೆಯುವ ಬರದಲ್ಲಿ ತನ್ನ ಪಂಚೆಯನ್ನೂ ಸೇರಿಸಿ ಮೊಳೆ ಹೊಡೆದು ಮೇಲೆದ್ದಾಗ ಭೂತವೇ ತನ್ನ ಪಂಚೆಯನ್ನು ಹಿಡಿದಿದೆ ಎಂದು ಭಾವಿಸಿ ಚೀರಿ ಹೃದಯಾಘಾತವಾಗಿ ಸಾಯುತ್ತಾನೆ ಎಂಬುದನ್ನು ತಿಳಿಸಿ, ನಂಬಿಕೆ ದೃಢವಾಗಿರಬೇಕು ಎನ್ನುತ್ತಾನೆ.

ದೇವರನ್ನು ನಂಬದ ವೈಚಾರಿಕ ಚಿಂತನೆಯ ಬರ್ಟ್ರಂಡ್ ರಸೆಲ್ ದೇವರಿಲ್ಲ ಎಂಬುದನ್ನು ಬಲವಾಗಿ ನಂಬಿದ್ದವನು. ವಿಮಾನ ಅಪಘಾತವಾಗಿ ಸಮುದ್ರದ ಮಧ್ಯೆ ಬಿದ್ದು ಬದುಕುಳಿದಾಗ ದೇವರ ದಯೆ ಎಂದವರಿಗೆ, ರಸೆಲ್ ಈಜು ಕಲಿತದ್ದರಿಂದ ಈಜಿ ಬರಲು ಸಾಧ್ಯವಾಯಿತು. ಇದರಲ್ಲಿ ಯಾವ ದೇವರ ದಯೆಯೂ ಇಲ್ಲ. ನಾನೂ ಎಂದಿಗೂ ದೇವರನ್ನು ನಂಬುವುದಿಲ್ಲ ಎಂಬ ತನ್ನ ದೃಢ ನಿಲುವನ್ನು ವ್ಯಕ್ತಪಡಿಸಿದ ವಿಚಾರವನ್ನೂ ತಿಳಿಸುತ್ತಾನೆ.

ಅಮೇರಿಕಾದಲ್ಲಿ ಸರಾಹ ದೆವ್ವಗಳಿಗಾಗಿ ಕಟ್ಟಿಸಿದ ಭವನದ ಕಥೆ ರೋಮಾಂಚನಕಾರಿಯಾಗಿದೆ. ಆದರೆ ಅದು ನಿಜವೋ ಸುಳ್ಳೋ ನಿರ್ಧರಿಸುವುದು ಕಷ್ಟ ಎಂದು ರಾಬರ್ಟ್ ಆ ಬಗ್ಗೆ ವಿಷಯ ಪ್ರಸ್ತಾಪಿಸುತ್ತಾನೆ. ಆಲೀವರ್ ವಿಲಿಯಂ ವಿಂಚೆಸ್ಟರ್ ಬಂದೂಕುಗಳನ್ನು ತಯಾರಿಸುವುದರಲ್ಲಿ ನಿಪುಣ. ಆತ 'ವಿಂಚೆಸ್ಟರ್ ತುಫಾಕಿ' ತಯಾರಿಸಿ, 'ರೈಫಲ್ ಕಿಂಗ್' ಎಂಬ ಬಿರುದನ್ನು ಪಡೆದವನು. ಆತನ ಹೆಂಡತಿ ಸರಾಹ. ಈತನಿಗೆ ಒಬ್ಬಳು ಮಗಳು. ಆದರೆ ೧೮೮೧ರಲ್ಲಿ ಸಾವನಪ್ಪಿದ. ಸ್ವಲ್ಪ ದಿನದಲ್ಲೇ ಆತನ ಮಗಳೂ ಕೂಡ ಸಾವನಪ್ಪುತ್ತಾಳೆ. ಸರಾಹ ಒಬ್ಬಂಟಿಯಾಗುತ್ತಾಳೆ. ಆದರೆ ಆಕೆಗೆ ತನ್ನ ಮನೆಯಲ್ಲಿ ದೆವ್ವಗಳಿವೆ ಎಂಬ ಸಂಶಯ. ಹಾಗಾಗಿ ಯೋಗನಿದ್ರೆಯಲ್ಲಿ ಪ್ರೇತಾತ್ಮಗಳ ಜೊತೆ ಮಾತನಾಡುವ ಆಡಂ ಕೂನ್ಸ್ ಎಂಬುವವನ ಬಳಿಗೆ ಹೋಗಿ ತನ್ನ ಅನುಮಾನವನ್ನು ವ್ಯಕ್ತ ಪಡಿಸಿದಾಗ, ಹೌದು ನಿನ್ನ ಗಂಡ ನಿನ್ನ ಮನೆಯಲ್ಲೇ ಇದ್ದಾನೆ. ಆತ ತಾನು ತಯಾರಿಸಿದ ಬಂದೂಕುಗಳಿಂದ ಅನೇಕ ಜನ ಸತ್ತಿರುವುದರಿಂದ ಮುಕ್ತಿ ಸಿಗದೆ ಅಲೆಯುತ್ತಿದ್ದೇನೆ. ಸತ್ತವರ ಆತ್ಮಗಳು ಒಂದು ಕಡೆ ವಾಸ ಮಾಡಲು ಸಾಧ್ಯವಾಗುವಂತೆ ಒಂದು ಭವನವನ್ನು ಕಟ್ಟಿಸು ಎಂದು ಹೇಳುತ್ತಿದ್ದಾನೆ ಎಂದಾಗ, ಗಂಡನ ಆಸೆಯನ್ನು ನೆರವೇರಿಸುವುದಕ್ಕೆ ಸಿದ್ಧಳಾಗಿ ಕ್ಯಾಲಿಪೋರ್ನಿಯಾದ 'ಸಾಂತಾಕ್ಲಾರಾ ವ್ಯಾಲಿ'ಯ ೩೦ ಎಕರೆ ವಿಶಾಲವಾದ ಪ್ರದೇಶದಲ್ಲಿ ಒಂದು ದೊಡ್ಡ ಭವನವನ್ನು ನಿರ್ಮಿಸುತ್ತಾಳೆ.

ಈ ಕಟ್ಟಡದ ವಿಶೇಷತೆ ಎಂದರೆ ಪ್ರತಿ ಹಂತದ ಬಳಿ ೧೩ ಮೆಟ್ಟಿಲುಗಳು, ಪ್ರತಿ ಕೋಣೆಯಲ್ಲಿ ೧೩ ಕಿಟಕಿಗಳು, ಮೇಲ್ಛಾವಣಿಯಲ್ಲಿ ಕಣ್ಣಿಗೆ ಕಾಣುವಂತೆ ಮರದ ೧೩ ತೊಲೆಗಳು, ಪ್ರತಿ ದೀಪ ಗುಚ್ಚದಲ್ಲಿ ೧೩ ದೀಪಗಳು, ೧೩ ಸ್ನಾನ ಗೃಹಗಳು, ಭವನದಲ್ಲಿ ೧೩ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಅಂದಿನಿಂದ ಅಮೇರಿಕಾದಲ್ಲಿ ೧೩ ದುರದೃಷ್ಟಕರ ಸಂಖ್ಯೆ! ಒಟ್ಟಾರೆ ಕಟ್ಟಡದಲ್ಲಿ ೨೦೦೦ ಬಾಗಿಲುಗಳು, ೧೦೦೦೦ ಕಿಟಕಿಗಳು ಇವೆ ಎಂಬುದನ್ನು ರಾಬರ್ಟ್ ತಿಳಿಸುತ್ತಾನೆ.

ಇದು ನಂಬುವುದಕ್ಕೆ ಕಷ್ಟಸಾಧ್ಯ ಎನ್ನುವ ರೀತಿಯಲ್ಲಿ ಗೆಳೆಯರು ತಮ್ಮದೇ ಆದ ವೈಚಾರಿಕ ನಿಲುವನ್ನು ವ್ಯಕ್ತಪಡಿಸುತ್ತಾರೆ. ಗಂಡ, ಮಗಳು ಸತ್ತ ಮೇಲೆ ಆಕೆ ಮಾನಸಿಕವಾಗಿ ಅಸ್ವಸ್ಥಳಾಗಿ, ಭ್ರಮಾಲೋಕದಲ್ಲಿದ್ದಿರಬಹುದು. ಅಥವಾ ಸರಾಹ ಭ್ರಮಾಲೋಕದಲ್ಲಿದ್ದು ಹುಚ್ಚಿಯಾಗಿದ್ದ ವಿಚಾರ ರಂಗು ರಂಗಾಗಿ ಹರಡಿದ್ದಿರಬಹುದು. ಅಥವಾ ಆಕೆಗೆ ಬುದ್ಧಿ ಭ್ರಮಣೆಯಾಗಿದ್ದಿರಬಹುದು ಎಂಬುದಾಗಿ ತಿಳಿಸಿ, ನಿರ್ಧರಿಸುವ ಗೋಜಿಗೆ ಹೋಗುವುದಿಲ್ಲ.

ಲೋಕದಲ್ಲಿ ಅನೇಕ ವಿಚಿತ್ರ ಘಟನೆಗಳು ಆಗಾಗ ಕೇಳಿ ಬರುತ್ತವೆ. ಅಂತಹ ಘಟನೆಗಳಲ್ಲಿ ಒಂದು 'ನೀರಿನಲ್ಲಿ ಬೆಳೆದ ಗಂಗಾಪುತ್ರ'. ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯ 'ಕುಅನೋ' ನದಿಯಲ್ಲಿ ಕಂಡ ವಿಚಿತ್ರ ದೃಶ್ಯ. ಒಬ್ಬ ಹುಡುಗ ನದಿಯ ನೀರಿನ ಮೇಲೆ ನಡೆದಾಡುತ್ತಿದ್ದ. ದಿನ ಕಳೆದಂತೆ ಅನೇಕ ಜನರಿಗೆ ಆ ಹುಡುಗ ಕಾಣಿಸಿಕೊಳ್ಳುತ್ತಿದ್ದ. ಆ ಊರಿನ ಸೋಮ್ನಿ ಎಂಬ ಹೆಂಗಸಿಗೂ ಪ್ರತಿ

[೫] ಅದೇ : ಪುಟ – ೧೮

[೬] ಅದೇ : ಪುಟ – ೨೧

ದಿನ ಆ ಹುಡುಗ ಕಾಣಿಸಿಕೊಳ್ಳಲಾರಂಭಿಸಿದ. ಸೂಕ್ಷ್ಮವಾಗಿ ನೋಡಿದಳು. ಬೆನ್ನಿನ ಮೇಲೆ ಕರಿ ಮಚ್ಚೆ ಇರುವುದನ್ನು ನೋಡಿ ಆ ಹುಡುಗ ತನ್ನ ಮಗನೇ ಎಂದು ನಿರ್ಧಾರ ಮಾಡುತ್ತಾಳೆ.
ಆಕೆಗೆ ರಾಮಚಂದ್ರ ಎಂಬ ಮಗ ಇದ್ದು ಕುಆನೋ ನದಿಯಲ್ಲಿ ಸ್ನಾನಕ್ಕೆ ಹೋದಾಗ, ನದಿಯ ದಡದಲ್ಲಿ ಇದ್ದ ಆ ಮಗು ಆಕಸ್ಮಿಕವಾಗಿ ನದಿಗೆ ಬೀಳುತ್ತದೆ. ಎಷ್ಟೇ ಹುಡುಕಿದರೂ ಮಗುವಿನ ಶವ ಸಿಗುವುದಿಲ್ಲ. ಆ ಮಗುವೇ ನೀರಿನಲ್ಲಿ ಬೆಳೆದು ಜಲಚರಗಳ ಹಾಗೆ ನಲಿಯುತ್ತಿದೆ ಎಂಬುದು ಅವರ ಭಾವನೆ. ಆರೈಕೆ ಮಾಡಿದ ಮಕ್ಕಳೇ ಬದುಕುವುದು ಕಷ್ಟವಾಗಿರುವಾಗ, ನೀರಿಗೆ ಜಾರಿ ಬಿದ್ದ ಮಗು ಬದುಕುಳಿದಿದ್ದಾರೂ ಹೇಗೆ? ಎಂಬ ಪ್ರಶ್ನೆಯನ್ನು ಗೆಳೆಯರು ಎತ್ತುತ್ತಾರೆ.
ಮನುಷ್ಯ ಪರಿಸರದ ಶಿಶುವಾದ್ದರಿಂದ ಪ್ರದೇಶದ ಪರಿಸರಕ್ಕೆ ಅನುಗುಣವಾಗಿ ಮಗು ಬೆಳೆಯುತ್ತದೆ ಎಂಬುದಕ್ಕೆ ಬಾವಲಿಗಳ ನಡುವೆ ಬೆಳೆದ ಮಗು ಬಾವಲಿಗಳ ಹಾಗೆಯೇ ಇದ್ದು, ಬಾವಲಿಗಳ ರೀತಿ ವರ್ತಿಸುವ ಹುಡುಗನ ವಿಚಾರವೂ ಕೂಡ ಪ್ರಸ್ತಾಪವಾಗುತ್ತದೆ. ಆಧುನಿಕ ಕಾಲದ ಸಂದರ್ಭದಲ್ಲೂ ಅನೇಕ ವಿಚಿತ್ರ ವ್ಯಕ್ತಿಗಳನ್ನು ಕಾಣುತ್ತೇವೆ. ಹಾಗೆಯೇ ಅವರೂ ಇರಬಹುದು ಎಂಬ ವಿಚಾರವನ್ನು ಸಾದ್ಯಂತವಾಗಿ ತಿಳಿಸುತ್ತಾರೆ.

**ವಿಚಿತ್ರ ಧರ್ಮಗುರುಗಳು**

ಧರ್ಮಗುರು, ಸನ್ಯಾಸಿ, ಸ್ವಾಮೀಜಿ ಎನಿಸಿಕೊಂಡವರ ಹುಚ್ಚುತನವನ್ನು ಪ್ರತಿಬಿಂಬಿಸುವ ಪ್ರಬಂಧಗಳು ಪೀಪಲ್ಸ್ ಟೆಂಪಲ್ ಮತ್ತು ನಗ್ನ ಸನ್ಯಾಸಿಗಳ ಆಶ್ರಮ. ಅಮೇರಿಕಾದ ಜಿಮ್ ಜೋನ್ಸ್ ವಿರೋಧಾಭಾಸಗಳ ವಿಲಕ್ಷಣ ವ್ಯಕ್ತಿ. ಈತ ತನ್ನನ್ನು ಧರ್ಮಗುರು ಎಂದುಕೊಂಡ ಅರೆಹುಚ್ಚ. ಮನಃಶಾಂತಿ ಇಲ್ಲದ ಸಾವಿರಾರು ಶ್ರೀಮಂತರು ಈತನ ಅನುಯಾಯಿಗಳಾಗಿದ್ದರು. ಸಾಕಷ್ಟು ಹಣವೂ ಇದ್ದುದ್ದರಿಂದ 'ಪೀಪಲ್ಸ್ ಟೆಂಪಲ್' ಎಂಬ ವಿಚಿತ್ರ ಆಧ್ಯಾತ್ಮಿಕ ಸಂಸ್ಥೆಯನ್ನು ಹುಟ್ಟು ಹಾಕಿದ್ದಲ್ಲದೆ, ಗಯಾನ ವೆನಿಜುವೆಲಾ ಹತ್ತಿರ ಭಯಂಕರವಾದ ದಟ್ಟವಾದ ಅರಣ್ಯದ ನಡುವೆ ೯೦೦ ಎಕರೆ ವಿಶಾಲವಾದ ಪ್ರದೇಶದಲ್ಲಿ ಆಶ್ರಮ ಸ್ಥಾಪಿಸಿದ. ನಗರವನ್ನೂ ನಿರ್ಮಾಣಮಾಡಿ, ಎಲ್ಲಾ ಸೌಕರ್ಯಗಳನ್ನು ಒದಗಿಸಿದ. ಅಗತ್ಯ ಪದಾರ್ಥಗಳನ್ನು ತಾವೇ ಬೆಳೆದು ತಿನ್ನುವ ವ್ಯವಸ್ಥೆ ಜಾರಿಗೆ ತರುತ್ತಾನೆ. "ಅವನು ರೂಪಿಸಿ ಜಾರಿಗೆ ತಂದಿದ್ದ ಸ್ವಯಂ ಪೂರ್ಣ ಸಮಾಜ ವ್ಯವಸ್ಥೆಯಲ್ಲಿ ಧ್ಯಾನ, ಪೂಜೆ, ಪ್ರಾರ್ಥನೆ ಜೊತೆಗೆ ದಿನದಲ್ಲಿ ೮ ತಾಸು ದೈಹಿಕ ದುಡಿಮೆಯೂ ಕಡ್ಡಾಯವಾಗಿತ್ತು."[೭] ಆರಂಭದಲ್ಲಿ ಇದು ಹಿತಕರ ಎನಿಸಿದರೂ ಕಾಲ ಕ್ರಮೇಣ ದೌರ್ಜನ್ಯ, ದಬ್ಬಾಳಿಕೆ ಎನಿಸಿ ಅಲ್ಲಿಂದ ಹೊರಬರಲು ಹಾತೊರೆಯುವಂತೆ ಆಗಿತ್ತು.
ಆದರೆ ಜಿಮ್ ಜೋನ್ಸ್ ತಾನು ಹಿಂದಿನ ಜನ್ಮದಲ್ಲಿ ಲೆನಿನ್ ಆಗಿದ್ದೆ, ಭಗವಾನ್ ಏಸು ತನ್ನನ್ನು ಜನರಿಗೆ ಧರ್ಮದ ದಾರಿ ತೋರಿಸು ಎಂದು ಕಳುಹಿಸಿದ್ದಾನೆ ಎಂದು ಹೇಳಿಕೊಳ್ಳುತ್ತಿದ್ದ. ಈತನಿಗೆ ಅಮೇರಿಕಾದ ಉನ್ನತ ಅಧಿಕಾರಿಗಳು ಮತ್ತು ರಾಜಕಾರಣಿಗಳ ಪರಿಚಯವಿತ್ತು. ಈತ ತಾನು ನಿರ್ಮಿಸಿದ್ದ ನಗರಕ್ಕೆ 'ಜೋನ್ಸ್ ಟೌನ್' ಎಂದು ನಾಮಕರಣ ಕೂಡ ಮಾಡಿದ್ದನು. ಈತನ ಅನುಯಾಯಿಗಳಾದ ೯೨೮ ಜನರೂ ಈತನನ್ನು ಧರ್ಮಗುರು ಎಂದು ಸ್ವೀಕರಿಸಿದ್ದರು. ಈತನ ನಗರವನ್ನು ದರ್ಶನ ಮಾಡಲು ಸೆನೆಟರ್ ಮೂವರು ಪತ್ರಕರ್ತರೊಡನೆ ಇಲ್ಲಿಗೆ ಬಂದು ಅನುಯಾಯಿಗಳ ಸಂದರ್ಶನ ಮಾಡಿದಾಗ, ಧರ್ಮಗುರುವಿನ ವಿರುದ್ಧ ಯಾರೂ ದನಿ ಎತ್ತುವ ಧೈರ್ಯ ಮಾಡುವುದಿಲ್ಲ. ಆದರೆ ೧೪ ಜನರ ತಂಡ ಸೆನೆಟರ್ ಮುಂದೆ ತಮ್ಮನ್ನು ಇಲ್ಲಿಂದ ನಗರಕ್ಕೆ ಕರೆದೊಯ್ಯುವಂತೆ ಬೇಡಿಕೊಳ್ಳುತ್ತಾರೆ. ಕನಿಕರದಿಂದ ಧರ್ಮಗುರುವಿನ ಅನುಮತಿಯನ್ನು ಕೇಳಿದಾಗ ಆತ ಧಾರಾಳವಾಗಿ ಅನುಮತಿ ನೀಡಿದರೂ, ಇದರಿಂದ ಕೆಂಡಾಮಂಡಲನಾದ ಅರೆಹುಚ್ಚ ಅಲ್ಲಿಂದ ಹೊರಹೋಗಲು ಬಯಸಿದವರನ್ನು ಜೊತೆಗೆ ಸೆನೆಟರ್ ಮತ್ತು ಪತ್ರಕರ್ತರನ್ನೂ ಕೊಲ್ಲಿಸುತ್ತಾನೆ.
ಈ ಘಟನೆಯಿಂದ ಹತಾಶನಾದ ಜಿಮ್ ಜೋನ್ಸ್ ಜೀವಮಾನದಲ್ಲಿ ತಾನು ಪಟ್ಟು ಹಿಡಿದು ಸಾಧಿಸಿದ ಸಂಕಲ್ಪಕ್ಕೆ ಆಘಾತವಾಯಿತೆಂದು ಹುಚ್ಚನಾಗುತ್ತಾನೆ. ತಾನು ಹುಟ್ಟು ಹಾಕಿದ ಧಾರ್ಮಿಕ ಸಂಸ್ಥೆಗೆ ಇತಿಶ್ರೀ ಹಾಡಲು ನಿರ್ಧರಿಸಿ, ನವೆಂಬರ್ ೧೮, ೧೯೭೮ರಂದು ಶಿಷ್ಯರೆಲ್ಲರನ್ನೂ ಕೇಂದ್ರ ಧ್ಯಾನ ಮಂದಿರಕ್ಕೆ ಬರಮಾಡಿಕೊಂಡು ಸೈನೆಡ್ ಮಿಶ್ರಿತ ಮಧುವನ್ನು ಕುಡಿಸಿ, ಗುಂಡು ಹಾರಿಸಿ ಕೊಂದು ಎಲ್ಲರೂ ಸತ್ತದ್ದನ್ನು ಖಾತ್ರಿಪಡಿಸಿಕೊಂಡು ತಾನೂ ಕೂಡ ಗುಂಡು ಹಾರಿಸಿಕೊಂಡು ಸಾಯುತ್ತಾನೆ. ದೇವರು ಮತ್ತು ಧರ್ಮದ ನಶೆ ಮೆದುಳಿಗೆ ಏರಿದಾಗ ನಡೆಯುವ ದುಷ್ಕೃತ್ಯವನ್ನು ಈ ಘಟನೆಯ ಮೂಲಕ ಕಾಣುತ್ತೇವೆ. ಇಂದೂ ಕೂಡ ಧರ್ಮದ ಅಮಲು ದೇಶದ ಮೂಲೆ ಮೂಲೆಯಲ್ಲೂ ಹರಡಿ, ಅನೇಕ ಅವಘಡಗಳಿಗೆ ಕಾರಣವಾಗುತ್ತಿರುವುದನ್ನು ಕಾಣುತ್ತೇವೆ. ಅಲ್ಲದೆ ನಿತ್ಯಾನಂದ ಎಂಬ ವ್ಯಕ್ತಿಯೂ ಇದೇ ರೀತಿ ಅನುಯಾಯಿಗಳ ಗುಂಪನ್ನು ರಚಿಸಿ 'ಕೈಲಾಸ' ಎಂಬ ರಾಷ್ಟ್ರ ರಚನೆ ಮಾಡಿರುವುದನ್ನು ಕೂಡ ಕಾಣುತ್ತೇವೆ.
ಜಿಮ್ ಜೋನ್ಸ್‌ನ ಪೀಪಲ್ ಟೆಂಪಲ್ ಪರಿಕಲ್ಪನೆಗಿಂತ ತೀರ ಭಿನ್ನವಾದ ಪರಂಪರೆಯನ್ನು ನಗ್ನ ಸನ್ಯಾಸಿಗಳ ಆಶ್ರಮದಲ್ಲಿ ಕಾಣುತ್ತೇವೆ. ಜಿಮ್ ಜೋನ್ಸ್ ಅರೆ ಹುಚ್ಚ. ಹಾಗಾಗಿ ಆತನ ನೀತಿ, ನಿಯಮ, ಆಚರಣೆಯ ವಿಧಿ ವಿಧಾನಗಳು ಬಹಳ ಕಠಿಣ. ಆದರೆ ನಗ್ನ ಸನ್ಯಾಸಿಗಳ ಆಶ್ರಮದಲ್ಲಿ ಆ ಬಗೆಯ ಕಠಿಣ ನಿಯಮಗಳಿಲ್ಲದಿರುವುದು ಅದರ ಭಿನ್ನತೆಗೆ ಕಾರಣವಾಗಿದೆ. ಈ ಬಗೆಯ ಆಶ್ರಮವನ್ನು ಶ್ರೀ ಶಿವಾನಂದ ಪರಮಹಂಸರು ಸ್ಥಾಪಿಸಿದ್ದು. "ಕೇರಳ ರಾಜ್ಯದ ತಿರುವನಂತಪುರ ಜಿಲ್ಲೆಯ ಕಾಡಿನಲ್ಲಿ 'ಕೌಲಂಬರ್' ಅಂತ ಒಂದು ಹಳ್ಳಿ. ಅಕ್ಕಪಕ್ಕ ಯಾವುದೇ ಹಳ್ಳಿಗಳಿಲ್ಲ. ಸುತ್ತಲು ದಟ್ಟವಾದ ಅರಣ್ಯ. ೩೦ ಎಕರೆ ಸಮತಟ್ಟಾದ ಬೇಸಾಯ ಯೋಗ್ಯ ಭೂಮಿ ಮಾಡಿಕೊಂಡಿದ್ದಾರೆ."[೮]
ಇಲ್ಲಿನ ಎಲ್ಲರೂ ಗಂಡಸರಾಗಲೀ, ಹೆಂಗಸರಾಗಲೀ ಬಟ್ಟೆಯನ್ನು ತ್ಯಜಿಸಿ ನಗ್ನರಾದವರೇ. ಕಾಡಿನ ನಡುವೆ ಒಂದೇ ದೊಡ್ಡದಾದ ವಿಶಾಲವಾದ ಹೆಂಚಿನ ಮನೆ. ಅದೇ ಆಶ್ರಮ. ೧೯ ಮಂದಿ ಸದಸ್ಯರು, ೧೨ ಜನ ಗಂಡಸರು, ೭ ಮಂದಿ ಹೆಂಗಸರು. ಇವರಲ್ಲಿ ರಹಸ್ಯವೆಂಬುದಿಲ್ಲ, ಎಲ್ಲವೂ ಪಾರದರ್ಶಕ. ರಾತ್ರಿ ಪೂರ್ತಿ ಮನೆಯಲ್ಲಿ ದೀಪ ಉರಿಯುತ್ತದೆ. ಯಾವ ಗಂಡು ಯಾವ ಹೆಣ್ಣಿನ ಪಕ್ಕ ಬೇಕಾದರೂ ಮಲಗಬಹುದು. ಮಗುವಾದರೆ ಮೂರು ವರ್ಷ ತಾಯಿಯ ಆರೈಕೆ; ತರುವಾಯ ಮಠದ ಸ್ವತ್ತು. ಕೇರಳದ ಬೇರೆ ಬೇರೆ ಭಾಗಗಳಲ್ಲಿ ಐದು ಶಾಖೆಗಳಿದ್ದು, ಮಕ್ಕಳನ್ನು ಬೇರೆ ಬೇರೆ ಶಾಖೆಗೆ ಸ್ಥಳಾಂತರಿಸುವುದರ ಮೂಲಕ ತಂದೆ ತಾಯಿಯರು ಯಾರು ಎಂಬುದು ತಿಳಿಯದ ಹಾಗೆ ಮಾಡುತ್ತಾರೆ.
ಜಿಮ್ ಜೋನ್ಸ್‌ನ ಹಾಗೆ ಇಲ್ಲಿನ ಎಲ್ಲರೂ ವ್ಯವಸಾಯವನ್ನು ಮಾಡಬೇಕು. ದಿನದ ೨೪ ಗಂಟೆಗಳಲ್ಲಿ ಪೂಜೆ, ಧ್ಯಾನ, ಪ್ರಾರ್ಥನೆ, ಪ್ರಾಣಾಯಾಮಕ್ಕೆ ೮ ಗಂಟೆ ಮೀಸಲು. ಉಳಿದ ವೇಳೆ ವ್ಯವಸಾಯ, ವಿಶ್ರಾಂತಿ. ಆಶ್ರಮದ ಸದಸ್ಯರಲ್ಲಿ ಜಾತಿ ಮತದ ಕಟ್ಟಿಲ್ಲ. ವಯಸ್ಸಿನ ಮಿತಿಯಿಲ್ಲ. ಯಾರು ಬೇಕಾದರೂ ಆಶ್ರಮದ ನೀತಿ ನಿಯಮಗಳಿಗೆ ಒಳಪಟ್ಟು ಸದಸ್ಯರಾಗಬಹುದು. ಆದರೆ ಹೊಸ ಸದಸ್ಯರಿಗೆ

[೭] ಅದೇ : ಪುಟ – ೪೧

[೮] ಅದೇ : ಪುಟ – ೪೫

ಕೆಲವೊಂದು ಪರೀಕ್ಷೆಗಳಿದ್ದು, ಆಶ್ರಮದ ಮುಖ್ಯಸ್ಥರಿಗೆ ನಿಷ್ಠೆ ಖಚಿತವಾಗುವವರೆಗೆ ಮನೆಯ ಒಳಗೆ ಪ್ರವೇಶವಿಲ್ಲ. ಗಂಡಸರೇ ಹೆಚ್ಚಾಗಿ ಸದಸ್ಯರಾಗಬಯಸಿ ಬರುತ್ತಾರೆ. ಆಶ್ರಮದ ನೇತಾರನ ಒಪ್ಪಿಗೆ ದೊರೆತ ಮೇಲೆ ಉಳಿದ ಸದಸ್ಯರ ರೀತಿ ಎಲ್ಲ ಬಗೆಯ ಸುಖ ಅನುಭವಿಸಲು ಅವಕಾಶ ಸಿಗುತ್ತದೆ.

ಆಶ್ರಮದ ಜಂಜಾಟ ಸಾಕೆನಿಸಿದರೆ ಯಾವುದೇ ತಡೆ ಇಲ್ಲದೆ ತೆರಳಬಹುದು. ವರ್ಷಕ್ಕೊಮ್ಮೆ ಜರುಗುವ ಶ್ರೀ ಶಿವಾನಂದ ಪರಮಹಂಸರ ಜನ್ಮದಿನಾಚರಣೆಯ ಸಂದರ್ಭದಲ್ಲಿ ಹಳೆಯ ಸದಸ್ಯರಲ್ಲದೆ ಆಶ್ರಮವನ್ನು ನೋಡಲು ಬಯಸುವ ಭಕ್ತಾದಿಗಳಿಗೆ ಮುಕ್ತ ಅವಕಾಶ, ಅಂದು ಎಲ್ಲರಿಗೂ ಅನ್ನಸಂತರ್ಪಣೆ. ನಗ್ನ ಸನ್ಯಾಸಿನಿಯರು ಅಂದು ಮನೆಯಿಂದ ಹೊರಬರುವಂತಿಲ್ಲ ಮತ್ತು ಸದಸ್ಯರಲ್ಲದೆ ಹಳೆಯ ಸದಸ್ಯರು ಮತ್ತು ಸಾರ್ವಜನಿಕರಿಗೆ ಒಳಗೆ ಪ್ರವೇಶವಿಲ್ಲ. ಹೀಗೆ ಮುಕ್ತ ಮತ್ತು ಪಾರದರ್ಶಕವಾದ ಆಶ್ರಮದ ವಿಚಾರವನ್ನು ಇಲ್ಲಿ ತಿಳಿಸುವುದರ ಮೂಲಕ ಜಿಮ್ ಜೋನ್ಸ್‌ನ ಪೀಪಲ್ಸ್ ಟೆಂಪಲ್ ಮತ್ತು ಆಶ್ರಮದ ನಡುವಿನ ಭಿನ್ನತೆಯನ್ನು ಗುರುತಿಸುತ್ತಾರೆ.

**ಚುಂಬನದ ಅದೃಷ್ಟ ಮತ್ತು ಪ್ರೀತಿಯ ವಿಚಿತ್ರಗಳು**

ಅಪರಿಚಿತ ಹುಡುಗಿಯರಿಗೆ ಚುಂಬನ ನೀಡಿದರೆ ಧರ್ಮದೇಟು ಬೀಳುವುದು ಖಚಿತ. ಅಂತಹದ್ದರಲ್ಲಿ ಆ ಚುಂಬನವೇ ಅವರಿಗೆ ಅದೃಷ್ಟವಾಗಿ ಪರಿಣಮಿಸುವದು ವಿಚಿತ್ರವೇ ಸರಿ! ಮದ್ರಾಸಿನಲ್ಲಿ ನಡೆದ ಸಿನಿಮೀಯ ಘಟನೆ ಎಂದು ಅದರ ವಿವರವನ್ನು ಅರ್ಜುನ ವಿವರಿಸುತ್ತಾನೆ. ವಿದ್ಯಾವಂತ, ಬುದ್ಧಿವಂತ ಯುವಕ; ಆದರೆ ನಿರುದ್ಯೋಗಿ. ಊಟಕ್ಕೂ ಪರದಾಡುವ ಪರಿಸ್ಥಿತಿ. ಹಾಗಾಗಿ ಕೆಲಸ ಹುಡುಕಿಕೊಂಡು ನಗರಕ್ಕೆ ಬರುತ್ತಾನೆ. ಹಸಿವನ್ನು ತಡೆಯಲಾರದೆ ಒಂದು ಹೋಟೇಲಿಗೆ ನುಗ್ಗಿ ಶ್ರೀಮಂತರ ಮಕ್ಕಳ ಬಳಿ ಅಂಗಲಾಚುತ್ತಾನೆ. ಆದರೆ ಅವರು ಅವನಿಗೆ ನೆರವಾಗುವುದರ ಬದಲು ಅಲ್ಲೇ ದೂರದಲ್ಲಿ ಪತ್ರಿಕೆಯನ್ನು ಓದುತ್ತಾ ಕುಳಿತ್ತಿದ್ದ ಹುಡುಗಿಯ ಕೆನ್ನೆಗೆ ಮುತ್ತು ನೀಡಿದರೆ ೧೦೦ ರೂ ಮತ್ತು ತಿನ್ನುವಷ್ಟು ಊಟ ಕೊಡಿಸುವುದಾಗಿ ಹೇಳುತ್ತಾರೆ. ಹಸಿವಿನ ತೀವ್ರತೆಯಲ್ಲಿ ಸರಿ ತಪ್ಪುಗಳನ್ನು ಎಣಿಸದೆ ನೇರವಾಗಿ ಹೋಗಿ ಆ ಹುಡುಗಿಯ ಕೆನ್ನೆಗೆ ಮುತ್ತು ನೀಡುತ್ತಾನೆ. ಆಕೆ ಕಿರುಚಿಕೊಳ್ಳಲು ಅಲ್ಲೇ ಇದ್ದ ಆಕೆಯ ತಂದೆ ಒದೆಯುತ್ತಾನೆ. ಮೊದಲೇ ಹಸಿವಿನಿಂದ ನಿತ್ರಾಣನಾಗಿದ್ದ ಹುಡುಗ ಮೂರ್ಛೆ ಹೋಗುತ್ತಾನೆ. ಆ ಶ್ರೀಮಂತ ಹುಡುಗರು ನಿಜ ಸ್ಥಿತಿಯನ್ನು ಹೇಳಿದಾಗ ಕನಿಕರದಿಂದ ಆತನಿಗೆ ತಿನ್ನಿಸಿ ತನ್ನ ಕಾರ್ಖಾನೆಯಲ್ಲಿ ಆ ಹುಡುಗಿಯ ತಂದೆ ಕೆಲಸ ಕೊಡುತ್ತಾನೆ. ಆತನ ನಿಷ್ಠೆ, ಬುದ್ಧಿವಂತಿಕೆ, ಪರಿಶ್ರಮವನ್ನು ಮೆಚ್ಚಿ ತನ್ನ ಅಳಿಯನನ್ನಾಗಿ ಮಾಡಿಕೊಳ್ಳುತ್ತಾನೆ. ಯಾವ ಹುಡುಗಿಗೆ ಮುತ್ತು ನೀಡಿ, ಪೆಟ್ಟು ತಿಂದಿದ್ದನೋ ಅದೇ ಹುಡುಗಿ ಆತನ ಪತ್ನಿಯಾಗುತ್ತಾಳೆ; ಕಾರ್ಖಾನೆಯ ಮಾಲೀಕನಾಗುತ್ತಾನೆ.

ಇದೇ ರೀತಿಯ ಇನ್ನೊಂದು ಘಟನೆ, ಇಂಗ್ಲೆಂಡಿನಲ್ಲಿ ಒಬ್ಬ ಯುವಕ ಸಿಗಾರ್ ತೆಗೆದುಕೊಳ್ಳಲು ಅಂಗಡಿಗೆ ಹೋಗುತ್ತಾನೆ. ಅಂಗಡಿ ಮಾಲೀಕನ ಮಗಳು ಈತನನ್ನು ನೋಡಿ ಹಲ್ಲು ಬಿಡುತ್ತಾಳೆ. ಆಗ ಈ ಯುವಕ ಏನಂದುಕೊಂಡನೋ ತಕ್ಷಣ ಆಕೆಯ ತುಟಿಗೆ ಒಂದು ಮುತ್ತು ನೀಡುತ್ತಾನೆ. ಸಿಟ್ಟಾದ ಹುಡುಗಿ ಈತನ ಕೆನ್ನೆಗೆ ಬಾರಿಸುತ್ತಾಳೆ. ಆಕೆಯ ಅಪ್ಪನೂ ಚೆನ್ನಾಗಿ ಬಾರಿಸುತ್ತಾನೆ. ಇದರಿಂದ ಸಿಟ್ಟಾದ ಯುವಕ ಕೋರ್ಟಿನಲ್ಲಿ ದಾವೆ ಹೂಡುತ್ತಾನೆ. ಅಲ್ಲೂ ಅಪಹಾಸ್ಯಕ್ಕೆ ಗುರಿಯಾಗಲು ಬೇಸತ್ತು ತನ್ನೆಲ್ಲಾ ಆಸ್ತಿಯನ್ನು ೬೫೦ ಡಾಲರ್ಗೆ ಮಾರಿ ದೇಶ ಬಿಟ್ಟು ಆಫ್ರಿಕಾಕ್ಕೆ ಬರುತ್ತಾನೆ. ಅಲ್ಲಿ ಕಿಂಬರ್ಲಿ ನಗರದ ಹೊರವಲಯದಲ್ಲಿ ಜಮೀನು ಖರೀದಿಸುತ್ತಾನೆ. ತಾನು ಆಸ್ತಿ ಮಾರಿ ತಂದಿದ್ದ ಹಣ ಸಂಪೂರ್ಣ ಖಾಲಿಯಾಗುತ್ತದೆ. ಆದರೆ ಜಮೀನಿನಲ್ಲಿ ವಜ್ರದ ನಿಕ್ಷೇಪವಿದೆ ಎಂದು ಒಂದು ಕಂಪನಿ ೪೦ ಸಾವಿರ ಡಾಲರ್‌ಗೆ ಜಮೀನನ್ನು ಖರೀಸುತ್ತದೆ. ನೋಡ ನೋಡುತ್ತಿದ್ದಂತೆಯೇ ಆತ ಶ್ರೀಮಂತನಾಗುತ್ತಾನೆ. ಹೀಗೆ ಈತನ ಜೀವನದಲ್ಲೂ ಚುಂಬನ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಪ್ರೀತಿ, ಪ್ರೇಮದಲ್ಲಿ ಸಾಕಷ್ಟು ವ್ಯತ್ಯಾಸಗಳಿರುವುದನ್ನು ಕಾಣುತ್ತೇವೆ. ಜಾತಿ, ಅಂತಸ್ತುಗಳೇ ಕಾರಣವಾಗಿ ಪ್ರೀತಿಯನ್ನು ಕೊಲ್ಲುವವರೂ ಇದ್ದಾರೆ. ಸೌದಿ ಅರೇಬಿಯಾದ ರಾಜಕುಮಾರನ ಮಗಳು ಮಾಷಾ ಮತ್ತು ಅದೇ ದೇಶದ, ಒಂದೇ ಧರ್ಮದ ಆದರೆ ಬಡವನಾದ ಅಲ್ ಷಹೀರ್ ನಡುವೆ ಪ್ರೇಮಾಂಕುರವಾಗುತ್ತದೆ. ಈ ವಿಚಾರ ತಿಳಿದು ಮಗಳಿಗೆ ಬೇರೆ ಮದುವೆಯ ಸಿದ್ಧತೆಯನ್ನು ನಡೆಸುವಾಗ, ಒಲ್ಲದ ಮದುವೆಯಿಂದ ದೂರಾಗಲು ರಾತ್ರೋರಾತ್ರಿ ಮನೆಯಿಂದ ಓಡಿ ಪ್ರಿಯಕರನ ಬಳಿಬಂದು, ಸಣ್ಣ ಮಸೀದಿಯಲ್ಲಿ ಮದುವೆಯನ್ನು ಮಾಡಿಕೊಂಡು, ಬದುಕು ಕಟ್ಟಿಕೊಳ್ಳುವ ಹೆಬ್ಬಯಕೆಯನ್ನು ಹೊಂದುತ್ತಾರೆ. ಸಾವಿನ ಭಯದಿಂದ ದೇಶವನ್ನೇ ತ್ಯಜಿಸುವ ನಿರ್ಧಾರ ಮಾಡಿದ ಇವರು ಗುಪ್ತಾಚಾರರ ಮೂಲಕ ತಂದೆಗೆ ಸಿಕ್ಕಿಬಿದ್ದು, ವ್ಯಭಿಚಾರದ ಆರೋಪದಲ್ಲಿ ಮರಣದಂಡನೆಗೆ ಗುರಿಯಾಗಿ ಸಾಯುತ್ತಾರೆ. ಧರ್ಮಾಂಧತೆ ಪ್ರೇಮಿಗಳನ್ನು ಬಲಿ ತೆಗೆದುಕೊಳ್ಳುತ್ತದೆ.

ಮದುವೆಯಾದ ಗಂಡ ಹೆಂಡಿರೂ ಕೂಡ ಸುಖವಾಗಿರದೆ ಕಲಹದ ಜಂಜಾಟದಲ್ಲಿ ಸಿಲುಕಿಕೊಂಡಿರುವ ವಿಚಾರವನ್ನು ಈ ರೀತಿಯಾಗಿ ತಿಳಿಸುತ್ತಾರೆ. ಜಗತ್ತಿನ ಸರ್ವಶ್ರೇಷ್ಠ ಕಾದಂಬರಿಕಾರ ಟಾಲ್‌ಸ್ಟಾಯ್ ಹೆಂಡತಿಯ ಕಿರುಕುಳದಿಂದ ಬೇಸತ್ತು ೧೯೮೦ರಲ್ಲಿ ಮನೆಯಿಂದ ಹೊರಬಂದು ನ್ಯುಮೋನಿಯಾದಿಂದ ಸತ್ತವಿಚಾರ, ವಿಶ್ವ ಪ್ರಸಿದ್ಧ ಸಾಕ್ರಟೀಸ್ ಕೂಡ ಸಂಸಾರದಲ್ಲಿ ಸುಖಿಯಾಗಿರಲಿಲ್ಲ ಎಂಬುದನ್ನು ಉದಾಹರಣೆಯ ಮುಖಾಂತರ ತಿಳಿಸುತ್ತಾ ಪ್ರೀತಿಯ ವಿಚಿತ್ರತೆಯನ್ನು ವಿವರಿಸುತ್ತಾರೆ. ಇವರು ಜಗತ್ತಿನಲ್ಲಿ ದೊಡ್ಡ ಹೆಸರನ್ನು ಪಡೆದಿದ್ದರೂ ಸಂಸಾರದಲ್ಲಿ ಖಳನಾಯಕರ ಹಾಗೆ ಅವರ ಪತ್ನಿಯರಿಗೆ ಭಾಸವಾಗಿದ್ದಾರೆ.

ಇಡೀ ಕೃತಿಯಲ್ಲಿ ವೈದ್ಯಶಾಸ್ತ್ರದ ಅರಿವೇ ಇಲ್ಲದಿದ್ದರೂ ವೈದ್ಯವನ್ನು ಮಾಡುವ, ಮನುಷ್ಯ ಸತ್ತನಂತರದ ಜೀವನ, ದೆವ್ವದ ಕೋಪ, ದೆವ್ವಗಳಿಗಾಗಿ ಕಟ್ಟಿಸಿದ ವಿಶಾಲವಾದ ಭವನ, ಜಲಚರಗಳ ಹಾಗೆ ಬೆಳೆದ ಹುಡುಗ, ಮನುಷ್ಯರ ಮಾಂಸವನ್ನು ತಿನ್ನುವ ವ್ಯಕ್ತಿಗಳು, ದೇವರು–ಧರ್ಮದ ಹೆಸರಿನಲ್ಲಿ ನಡೆಸುವ ಆಚರಣೆಯ ಅತಿರೇಕ, ಆದಿವಾಸಿ ಬುಡಕಟ್ಟು ಜನಾಂಗಗಳಲ್ಲಿರುವ ವಿಚಿತ್ರ ಸಂಪ್ರದಾಯಗಳು, ಮನುಷ್ಯನ ವಿಚಿತ್ರ ಗುಣಸ್ವಭಾವಗಳು ಇವೇ ಮೊದಲಾದ ವಿಚಾರಗಳ ಬಗ್ಗೆ ವಿಸ್ಮಯಕಾರಿಯಾದ ಅಂಶಗಳನ್ನು ತಮ್ಮದೇ ಅಧ್ಯಯನದ ನೆಲೆಯಲ್ಲಿ ಲೇಖಕರು ವಿವರಿಸಿದ್ದಾರೆ. ಇವುಗಳನ್ನು ಗಮನಿಸಿದಾಗ ಇವು ನಿಜವೇ? ನಿಜವಾಗಿಯೂ ನಡೆದಿರುವವೇ? ಇಲ್ಲ ಕಾಲ್ಪನಿಕವೇ? ನಂಬಲರ್ಹವೇ? ಎಂಬಿತ್ಯಾದಿ ಪ್ರಶ್ನೆಗಳು ಮೂಡುವುದು ಸಹಜ. ಲೇಖಕರು ಘಟನೆಗಳನ್ನು ಪ್ರಸ್ತಾಪ ಮಾಡುವಾಗ ಕಥೆಯ ರೂಪದಲ್ಲಿ ತಿಳಿಸಿ ನಡೆದ ಸ್ಥಳ, ಕಾಲ, ವ್ಯಕ್ತಿ ಇವುಗಳನ್ನು ಕರಾರುವಕ್ಕಾಗಿ ನೀಡುತ್ತಾರಲ್ಲದೆ, ಎಷ್ಟೋ ಘಟನೆಗಳ ಸಂದರ್ಭದಲ್ಲಿ ಅನೇಕರು ಪರೀಕ್ಷೆಗಳನ್ನು ಮಾಡಿ ಒಪ್ಪಿಕೊಂಡಿರುವ ವಿಚಾರವನ್ನು ಕೂಡ ಸಾದರಪಡಿಸುತ್ತಾರೆ. ಆದರೂ ಕೊನೆಯಲ್ಲಿ 'ನಿಜವೋ ಸುಳ್ಳೋ ನಿರ್ಧರಿಸಿ' ಎಂದು ಹೇಳುವುದರ ಮೂಲಕ ಅಂತಿಮ ತೀರ್ಮಾನವನ್ನು ಸಹೃದಯರಿಗೇ ಬಿಡುತ್ತಾರೆ.

**ಪರಾಮರ್ಶನ ಗ್ರಂಥಗಳು**

೧. ಅಮೂರ ಜಿ.ಎಸ್. ಆಧುನಿಕ ಕನ್ನಡ ವಿಮರ್ಶೆ, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೮

೨. ಕೀರ್ತಿನಾಥ ಕುರ್ತಕೋಟಿ, ಸಾಹಿತ್ಯದಲ್ಲಿ ವೈಚಾರಿಕತೆ, ಮನೋಹರ ಗ್ರಂಥಮಾಲಾ, ಧಾರವಾಡ, ೨೦೦೪
೩. ನಾಗಭೂಷಣಾ ಸ್ವಾಮಿ. ಓ. ಎಲ್. ವಿಮರ್ಶೆಯ ಪರಿಭಾಷೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೧೧
೪. ನಾಗರತ್ನಕುಮಾರಿ ಬಿ.ಎಸ್. (ಸಂ), ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮
೫. ಪ್ರಭುಶಂಕರ, ಸಾಹಿತ್ಯ ಮತ್ತು ಆಧುನಿಕತೆ, ಪ್ರಸಾರಾಂಗ, ಬೆಂಗಳೂರು ವಿ.ವಿ, ಬೆಂಗಳೂರು, ೧೯೯೩